ಕರ್ನಾಟಕ ಲಲಿತಕಲಾ ಅಕಾಡೆಮಿ


ಎಮ್. ಆರ್. ಬಾಳೀಕಾಯಿ

M.R. Balikai



ಸುರೇಶ ಡಿ. ಹಾಲಭಾವಿ

Suresh D. Halbhavi



ಎಂ.ಆರ್. ಬಾಳೀಕಾಯಿ

M.R. Balikai

ಪೀಟರ್ ಲೂಯಿಸ್

ಪ್ರಧಾನ ಸಂಪಾದಕರು

ಸುರೇಶ ಡಿ. ಹಾಲಭಾವಿ

ಲೇಖಕರು

ಕರ್ನಾಟಕ ಲಲಿತಕಲಾ · ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨

M.R. Balikai - A monograph by Shri Suresh D. Halbhavi; Principal, Halbhavi School of Art, Dharwad and Published by Shri B.T. Munirajaiah, Registrar, Karnataka Lalithakala Academy, Kannada Bhavana, J.C. Road, Bangalore - 560 002. Tel: 080-22480297

First Edition: 2004

Translated by: Shri Suresh D. Halbhavi

Pages: 48+8

Price: Rs. 40/-

ಮುಖಚಿತ್ರ: ಬಾಳೀಕಾಯಿ ಅವರ ಕಲಾಕೃತಿ
ವಿನ್ಯಾಸ: ಶ್ರೀ ಸುಧಾಕರ ದರ್ಬೆ

ಮುದ್ರಕರು: ಸಿದ್ದೇಶ್ವರ ಪ್ರಿಂಟರ್ಸ್
171, ಕಾಟನ್‌ಪೇಟೆ ಮುಖ್ಯರಸ್ತೆ,
ಬೆಂಗಳೂರು - 560 053
ದೂರವಾಣಿ: 080-26705793



ಅಧ್ಯಕ್ಷರ ಮಾತು

ಲಲಿತಕಲಾ ಅಕಾಡೆಮಿಯ ಅಧ್ಯಕ್ಷನಾಗಿ ಮೂರು ವರ್ಷಗಳಾಗುತ್ತಿದೆ. ಈ ಅವಧಿಯಲ್ಲಿ ನಾನು ಮತ್ತು ಸದಸ್ಯರ ತಂಡ ರೂಪಿಸಿ, ನಿರ್ವಹಿಸಿದ ಕಾರ್ಯಕ್ರಮಗಳನ್ನು ನಿಮ್ಮ ಮುಂದಿರುವುದು ನನ್ನ ಜವಾಬ್ದಾರಿ ಹಾಗೂ ಸಂತೋಷದ ವಿಷಯ. ನಾವು ಮೂರು ವರ್ಷಗಳ ಕಾರ್ಯಕ್ರಮಗಳನ್ನು ರೂಪಿಸುವಾಗ ಯುವ ಪೀಳಿಗೆಗೆ ಸಿಂಹಪಾಲು ನೀಡಿದ್ದೇವೆ, ಹೊಸತನವನ್ನೂ ಕಾಪಾಡಿಕೊಂಡಿದ್ದೇವೆ.

'ಯಂಗ್ ಸ್ಟ್ರೋಕ್ಸ್', 'ನಿಮ್ಮೊಂದಿಗೆ ನಾವು', 'ಮನೆಗೊಂದು ಕಲಾಕೃತಿ', 'ಜನಪದ ಕೃತಿ-ಆಧುನಿಕ ಕೃತಿ', ಯುವಕಲಾವಿದರಿಗೆ ಫೆಲೋಶಿಪ್ ಮುಂತಾದ ನವೀನ ಹಾಗೂ ಉಪಯುಕ್ತ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಕರ್ನಾಟಕವನ್ನು ನಾಲ್ಕು ವಿಭಾಗಗಳಾಗಿ ಮಾಡಿ, ಪ್ರತಿ ಕಾರ್ಯಕ್ರಮದಲ್ಲಿ ನಾಲ್ಕೂ ವಿಭಾಗದ ಕಲಾವಿದರಿಗೆ ಸಮಪಾಲು ದೊರಕುವಂತೆ ಮಾಡಿದ್ದು ಕಲಾವಿದರಿಗೆ ಸಂತಸ ತಂದಿದೆ.

ಈ ಎಲ್ಲಾ ಕಾರ್ಯಕ್ರಮಗಳು ಯುವಶಕ್ತಿಯ ಪಾಲಾದರೆ, ಚಿತ್ರದುರ್ಗದ ಸಾಣೆಹಳ್ಳಿಯಲ್ಲಿ ಹಿರಿಯ ಕಲಾವಿದರ ಶಿಬಿರ, ಬೆಂಗಳೂರಿನಲ್ಲಿ ಕಲಾವಿದೆಯರ ಶಿಬಿರ, ಬೆಂಗಳೂರು ಹಾಗೂ ಗುಲ್ಬರ್ಗಾದಲ್ಲಿ ಗ್ರಾಫಿಕ್ ಶಿಬಿರವನ್ನು ನಡೆಸಿದ್ದೇವೆ. ಶ್ರೀ ಜಿ. ಎಸ್. ದಂಡಾವತಿಮಠ ಹಾಗೂ ಡಾ|| ಎಂ.ವಿ. ಮಿಣಜಿಗಿಯವರ ಶತಮಾನೋತ್ಸವ ಕಾರ್ಯಕ್ರಮಕ್ಕೂ ಪರೋಕ್ಷವಾಗಿ ನಾವು ಕಾರಣಕರ್ತರಾಗಿದ್ದೇವೆ.

ಇದರೊಂದಿಗೆ ವಾರ್ಷಿಕ ಕಲಾಪ್ರದರ್ಶನ, ವಾರ್ಷಿಕ ಪ್ರಶಸ್ತಿ ಸಮಾರಂಭ, ಜಿಲ್ಲಾವಾರು ಕಲಾಶಿಬಿರ, ಏಕವ್ಯಕ್ತಿ ಹಾಗೂ ಸಮೂಹ ಕಲಾಪ್ರದರ್ಶನಗಳಿಗೆ ಧನಸಹಾಯ ಮುಂತಾದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದೇವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯಕ್ರಮ, ಐಫಾಕ್ಸ್ ಕಲಾಪ್ರದರ್ಶನಗಳಿಗೆ ಸಹಯೋಗ ನೀಡಿದ್ದೇವೆ.

ಹಿರಿಯ ಕಲಾವಿದರಿಗೆ ನೀಡುವ ವಾರ್ಷಿಕ ಪ್ರಶಸ್ತಿಯ ಜೊತೆಗೆ ಕಲಾಕ್ಷೇತ್ರದ ಅಭಿವೃದ್ಧಿಗೆ ನಿಸ್ವಾರ್ಥ ಸೇವೆ ಸಲ್ಲಿಸಿದ ಚೇತನಗಳಿಗೆ ವಾರ್ಷಿಕ ಪುರಸ್ಕಾರವನ್ನು ನೀಡಿ ಗೌರವಿಸುವುದನ್ನು ಪ್ರಾರಂಭಿಸಿದ್ದೇವೆ. ಈ ವರ್ಷ ವಾರ್ಷಿಕ ಕಲಾ ಪ್ರದರ್ಶನದಲ್ಲಿ ನೀಡಿದ ಬಹುಮಾನಗಳನ್ನು ಹಿರಿಯ ಕಲಾವಿದರ ಹೆಸರಿನಲ್ಲಿ ನೀಡುವುದರೊಂದಿಗೆ ಅವರನ್ನು ಸ್ಮರಿಸಿದ್ದೇವೆ.

ಇಷ್ಟೆಲ್ಲಾ ಆದರೂ ಮನಸ್ಸಿನಲ್ಲಿ ಕೊರತೆ ಕಾಡುತ್ತಿದೆ. ರಾಷ್ಟ್ರಮಟ್ಟದ ಕಲಾಶಿಬಿರ, ರಾಷ್ಟ್ರಮಟ್ಟದ ವಿಚಾರಗೋಷ್ಠಿ, ಕಲಾಕೃತಿಗಳ ಮಾರಾಟ ಕೇಂದ್ರ, ಹಾಸನದಲ್ಲಿ ರಾಷ್ಟ್ರೀಯ ಕಲಾಗ್ರಾಮ, ವಿಭಿನ್ನ ಶೈಲಿಯ ಭಾವಚಿತ್ರದ ಶಿಬಿರವನ್ನು ಈ ಅವಧಿಯಲ್ಲಿ ನಡೆಸಲಾಗದಿದ್ದುದಕ್ಕೆ ನಮ್ಮ ಮನಸ್ಸುಗಳಲ್ಲಿ ಇನ್ನೂ ಅತೃಪ್ತಿ ಕಾಡುತ್ತಿದೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಹತ್ತು ಹಲವು ಕಾರ್ಯಕ್ರಮಗಳಲ್ಲಿ ಪುಸ್ತಕ ಪ್ರಕಟಣಾ ಯೋಜನೆಯೂ ಒಂದು. ಅದರ ಅಂಗವಾಗಿ ಪ್ರತಿ ಮೂರು ತಿಂಗಳಿಗೊಮ್ಮೆ **'ಕಲಾವಾರ್ತೆ'** ಎಂಬ ಸಂಚಿಕೆಯನ್ನು ಅಕಾಡೆಮಿ ನಿಯಮಿತವಾಗಿ ಪ್ರಕಟಿಸುತ್ತ ಬಂದಿದೆ. ಮುದ್ರಣ ಹಾಗೂ ವಿನ್ಯಾಸಗಳಲ್ಲಿ ಕಲಾತ್ಮಕತೆಗೆ ಒತ್ತುಕೊಟ್ಟು, ಕಲಾವಾರ್ತೆಯನ್ನು ವಾರ್ತಾ ಸಂಚಿಕೆಯಾಗಿಸದೆ ಸಂಗ್ರಹಯೋಗ್ಯ ಸಂಚಿಕೆಯನ್ನಾಗಿಸಿದ್ದೇವೆ. **ಕಲಾವಿದರ ಮಾಲಿಕೆಯಲ್ಲಿ** ಒಂಬತ್ತು ಜನ ಹಿರಿಯ ಕಲಾವಿದರಾದ ಕೆ. ಕೇಶವಯ್ಯ, ಎಸ್. ಕಾಳಪ್ಪ, ಎಚ್.ಎಸ್. ಇನಾಮತಿ, ರಘೋತ್ತಮ ಪುಟ್ಟಿ, ವ್ಹಿ.ಟಿ. ಕಾಳೆ, ಪುರುಷೋತ್ತಮ ಕಾರಂತ, ಎಂ.ಆರ್. ಬಾಳೀಕಾಯಿ, ವ್ಹಿ.ಜಿ. ಅಂದಾನಿ ಹಾಗೂ ಸಿ. ಚಂದ್ರಶೇಖರ್ ಅವರುಗಳ ಜೀವನ ಸಾಧನೆಗಳ ಪುಸ್ತಕಗಳು ಸಿದ್ಧಗೊಂಡಿವೆ. ಇವರಲ್ಲಿ ಮೂವರು ಕಲಾವಿದರು ಇಂದು ಇಲ್ಲವಾಗಿದ್ದಾರೆ. ಅವರ ಬಗ್ಗೆ ಮಾಹಿತಿ ಸಂಗ್ರಹಿಸುವುದು ಅತ್ಯಂತ ದುಸ್ತರ ಕಾರ್ಯವಾಗಿದ್ದು, ಆಯಾ ಲೇಖಕರು ಈ ಕಾರ್ಯವನ್ನು ಸಾಹಸವೆಂಬಂತೆ ತೆಗೆದುಕೊಂಡು ಬರೆದಿದ್ದಾರೆ. ಉಳಿದ ಲೇಖಕರು ತಮ್ಮ ಲೇಖನದ ಕಲಾವಿದರನ್ನು ಅನೇಕ ಬಾರಿ ಸಂಪರ್ಕಿಸಿ, ಸಂದರ್ಶಿಸಿ ಅಭ್ಯಾಸ ಪೂರ್ಣವಾಗಿ ಬರೆದಿದ್ದಾರೆ. ಈ ಎಲ್ಲ ಬರಹಗಾರರಿಗೆ ಮತ್ತು ಅದನ್ನು ಸಂಪಾದಿಸಿಕೊಟ್ಟ ಡಾ|| ಅ.ಲ. ನರಸಿಂಹನ್ ಅವರಿಗೆ ಅಕಾಡೆಮಿ ಪರವಾಗಿ ಧನ್ಯವಾದಗಳು. ಕರ್ನಾಟಕದ ಎಲ್ಲ ಜಿಲ್ಲೆಗಳ ಸಮಗ್ರ ಚಿತ್ರಕಲೆಯ ಸ್ಥೂಲನೋಟವನ್ನು ಒಂದೆಡೆಗೆ ತರುವ ಉದ್ದೇಶದಿಂದ **ಕರ್ನಾಟಕ ಚಿತ್ರಕಲಾ ದರ್ಶನ** ಎಂಬ ಬೃಹತ್ ಸಂಪುಟವನ್ನು ತರುತ್ತಿದ್ದು, ಅದಕ್ಕೆ ಹೆಚ್ಚಿನ ಅನುದಾನಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. **ಜನಪ್ರಿಯ ಕಲಾಮಾಲೆಯ** ಅಡಿಯಲ್ಲಿ ಕರ್ನಾಟಕದ ದೇಶಿ ಚಿತ್ರಕಲೆಯನ್ನು ಪ್ರಾದೇಶಿಕ ವೈಶಿಷ್ಟ್ಯತೆಯ ಹಿನ್ನಲೆಯಲ್ಲಿ ಪರಿಚಯಿಸುವ ಹತ್ತು ಪುಸ್ತಕಗಳನ್ನು ತಜ್ಞ ವಿದ್ವಾಂಸರಿಂದ ಬರೆಯಿಸಿ ಇದೀಗ ಪ್ರಕಟಿಸುತ್ತಿದ್ದೇವೆ. ಅವುಗಳನ್ನು ಸುಂದರವಾಗಿ ಸಂಪಾದಿಸಿ ಕೊಟ್ಟ ಅಕಾಡೆಮಿಯ ಸದಸ್ಯರಾದ ಸಂಶೋಧಕ ಡಾ|| ಎಸ್.ಸಿ. ಪಾಟೀಲರು. ಅವರಿಗೆ ಅಕಾಡೆಮಿಯ ಪರವಾಗಿ ವಂದನೆಗಳು. ಅಕಾಡೆಮಿಯ ಇನ್ನೊಂದು ಗ್ರಂಥ ಭಾವಚಿತ್ರ ಪರಂಪರೆಯ **'ಮುಖಗಳೊಂದಿಗೆ ಮುಖಾಮುಖಿ'** ಅಧ್ಯಯನ ಯೋಗ್ಯ ಕೃತಿಯನ್ನು ನಮ್ಮ ಮನವಿಯಂತೆ ಬರೆದುಕೊಟ್ಟಿರುವ ವಿಮರ್ಶಕರಾದ ಶ್ರೀ ಕೆ.ವಿ. ಸುಬ್ರಹ್ಮಣ್ಯಂ ರವರಿಗೆ ಅಕಾಡೆಮಿಯ ಪರವಾಗಿ ವಂದನೆಗಳು. ಇದಲ್ಲದೆ ಇಪ್ಪತ್ತು ಹಿರಿಯ-ಕಿರಿಯ ಕಲಾವಿದರ ಕಲಾಕೃತಿಗಳ ಚಿತ್ರಸಂಪುಟವೊಂದು ಅಕಾಡೆಮಿ ಸದಸ್ಯ ಶ್ರೀ ಪ.ಸ. ಕುಮಾರ್ ಅವರ ಸಂಪಾದಕತ್ವದಲ್ಲಿ ಬರುತ್ತಿದೆ.

ನಾವು ಮೂರು ವರ್ಷಗಳಲ್ಲಿ ಮಾಡಿದ ಕಾರ್ಯಕ್ರಮಗಳ ಪಟ್ಟಿಯನ್ನು ವಾರ್ಷಿಕ ವರದಿಯಲ್ಲಿ ನೀಡುತ್ತಿದ್ದೇವೆ. ಎಲ್ಲಾ ಕಾರ್ಯಕ್ರಮಗಳಲ್ಲೂ ನಮ್ಮೊಡನೆ ಸಹಕರಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೇಂದ್ರ ಲಲಿತಕಲಾ ಅಕಾಡೆಮಿ, ರೀಜನಲ್ ಸೆಂಟರ್ ಚೆನ್ನೈ, ಐಫಾಕ್ಸ್ ಸಂಸ್ಥೆಗಳಿಗೆ ನಮ್ಮ ವಂದನೆಗಳು.

ನನ್ನೊಡನೆ ಇದುವರೆಗೂ ಸಹಕರಿಸಿ ಉಪಯುಕ್ತ ಸಲಹೆಗಳನ್ನು ನೀಡಿದ ಸದಸ್ಯ ಮಿತ್ರರೆಲ್ಲರಿಗೂ ನನ್ನ ಇಡೀ ತಂಡದ ಪರವಾಗಿ ಹಾಗೂ ವೈಯಕ್ತಿಕವಾಗಿ ಮತ್ತೊಮ್ಮೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ವಿಶೇಷವಾಗಿ ಸಮನ್ವಯಕಾರರಾಗಿ ಹಲವಾರು ಕಾರ್ಯಕ್ರಮಗಳನ್ನು ಆಗುಮಾಡಿದ ಸದಸ್ಯ ಶ್ರೀ ಪ.ಸ.ಕುಮಾರ್ ಅವರಿಗೆ ನನ್ನ ಕೃತಜ್ಞತೆಗಳು. ಈ ಎಲ್ಲ ಪ್ರಕಟಣೆಗಳೂ ವಿವಿಧ ಮುದ್ರಣಾಲಯಗಳಲ್ಲಿ ರೂಪತಳೆದಿದ್ದು, ಅವುಗಳ ಮಾಲೀಕರಿಗೆ, ಮುಖಚಿತ್ರವನ್ನು ಕಲಾಕೃತಿಯೆಂಬಂತೆಯೇ ರಚಿಸಿಕೊಟ್ಟ ಶ್ರೀ ಸುಧಾಕರ ದರ್ಬೆ ಅವರಿಗೆ, ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಬಿ.ಟಿ. ಮುನಿರಾಜಯ್ಯ ಮತ್ತು ಸಿಬ್ಬಂದಿ ವರ್ಗದ ರಾಜು, ವೆಂಕಟೇಶ್, ಗಂಗಾಧರ, ಮುತ್ತು, ಬಾಲು, ಲೋಕೇಶ ಮತ್ತು ಅರವಿಂದ ಅವರುಗಳಿಗೆ ಹಾಗೂ ಪ್ರತ್ಯಕ್ಷ, ಪರೋಕ್ಷವಾಗಿ ಬೆಂಬಲ ನೀಡಿದ ಮಹನೀಯರಿಗೆಲ್ಲಾ ನಮ್ಮ ಧನ್ಯವಾದಗಳು.

ನಮ್ಮ ಈ ಕಿರು ಪ್ರಯತ್ನಗಳನ್ನು ಕಲಾವಿದರು, ಸಹೃದಯ ಕಲಾಸಕ್ತರು ತುಂಬು ಹೃದಯದಿಂದ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಪೀಟರ್ ಲೂಯಿಸ್

ಲೇಖಕರ ಮಾತು

'ಕಲೆಯೇ ಜೀವನ, ಜೀವನವೇ ಕಲೆ', ಎಂದು ಬದುಕಿದವರಲ್ಲಿ ಕರ್ನಾಟಕದ ಹಿರಿಯ ಕಲಾವಿದ ಶ್ರೀ ಎಂ.ಆರ್. ಬಾಳೀಕಾಯಿಯವರು ಸಹ ಒಬ್ಬರಾಗಿದ್ದಾರೆ. ಬಾಲ್ಯದಿಂದಲೂ ಚಿತ್ರಕಲೆಯಲ್ಲಿ ಇವರಿಗೆ ಅಪಾರ ಆಸಕ್ತಿ. ಒಂದು ಬಡ ಕುಟುಂಬದಲ್ಲಿ ಜನಿಸಿದ ಇವರಿಗೆ ಪ್ರೋತ್ಸಾಹ ದೊರೆಯದಿದ್ದರೂ, ಒಬ್ಬ ದೊಡ್ಡ ಕಲಾವಿದನಾಗಬೇಕೆಂಬ ಅವರ ಛಲ ಮತ್ತು ಪರಿಶ್ರಮದಿಂದ ಅವರು ಉನ್ನತ ಸ್ಥಾನಕ್ಕೆ ಬಂದರೆಂದು ಹೇಳಿದರೆ ತಪ್ಪಾಗಲಾರದು.


ಎಂ.ಆರ್. ಬಾಳೀಕಾಯಿಯವರು ನಾಡಿನ ಹಿರಿಯ ಕಲಾಚೇತನರಾದ ಶ್ರೀಯುತ ಡಿ.ವಿ. ಹಾಲಭಾವಿ ಮತ್ತು ಟಿ.ಪಿ. ಅಕ್ಕಿಯವರಂತಹ ಕಲಾವಿದರಿಂದ ಚಿತ್ರಕಲಾ ಶಿಕ್ಷಣ, ಮಾರ್ಗದರ್ಶನ ಪಡೆದು, ಒಬ್ಬ ಉತ್ತಮ ಕಲಾ ಶಿಕ್ಷಕ ಹಾಗೂ ಕಲಾವಿದರಾಗಿ ಬೆಳೆದರು. ಕಲಾ ಗುರುಗಳಲ್ಲದೆ ಇವರ ಶಾಲಾ ಶಿಕ್ಷಕರನ್ನು ಇವರು ಅತ್ಯಂತ ಗೌರವದಿಂದ, ಕೃತಜ್ಞತಾ ಭಾವನೆಯಿಂದ ನೆನೆಯುತ್ತಾರೆ. ವಿದ್ಯಾರ್ಥಿಗಳ ಬಗ್ಗೆ ವಿಶೇಷ ಪ್ರೀತಿ, ಕಾಳಜಿ. ಹೀಗಾಗಿ ವಿದ್ಯಾರ್ಥಿಗಳಿಗೆ ಇವರು ಅಚ್ಚುಮೆಚ್ಚಿನ ಗುರುಗಳಾಗಿದ್ದಾರೆ.

ಶ್ರೀ ಬಾಳೀಕಾಯಿಯವರು ವಿವಿಧ ಮಾಧ್ಯಮಗಳಲ್ಲಿ ಸಾಕಷ್ಟು ಕಲಾಕೃತಿಗಳನ್ನು ರಚಿಸಿರುತ್ತಾರೆ. ಇವರ ಕಲಾಕೃತಿಗಳು ನಾಡಿನ ವಿವಿಧೆಡೆ ಸಂಗ್ರಹಗೊಂಡಿದ್ದು, ಜನರ ಮೆಚ್ಚುಗೆಯನ್ನು ಪಡೆದಿದೆ. ಅನೇಕ ಏಕ ವ್ಯಕ್ತಿ ಮತ್ತು ಸಮೂಹ ಕಲಾ ಪ್ರದರ್ಶನಗಳಲ್ಲಿ, ಪ್ರಾತ್ಯಕ್ಷಿಕೆ, ಕಲಾಶಿಬಿರ, ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿರುತ್ತಾರೆ. ೧೯೯೩ರಲ್ಲಿ 'ಬೆಲ್ಲದ ಪ್ರತಿಷ್ಠಾನ'ದಿಂದ ಜಿಲ್ಲಾ ಮಟ್ಟದ ಉತ್ತಮ ಚಿತ್ರಕಲಾ ಶಿಕ್ಷಕ ಪ್ರಶಸ್ತಿ, ೧೯೯೫ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ವಾರ್ಷಿಕ ಕಲಾವಿದರ ಪ್ರಶಸ್ತಿ, ೨೦೦೩ರಲ್ಲಿ ಆಲ್ ಇಂಡಿಯಾ ಫೈನ್ ಆರ್ಟ್ಸ್ ಅಂಡ್ ಕ್ರಾಫ್ಟ್ಸ್ ಸೊಸೈಟಿ, ದೆಹಲಿಯ ಹಿರಿಯ ಕಲಾವಿದರ ಸನ್ಮಾನ ಮತ್ತು ಅನೇಕ ಪ್ರಶಸ್ತಿ ಪತ್ರಗಳನ್ನು ಪಡೆದಿದ್ದಾರೆ.


ಚಿತ್ರಕಲೆಯ ಜೊತೆಗೆ ರಂಗೋಲಿ ಕಲೆ ಹಾಗೂ ಸಾಹಿತ್ಯದಲ್ಲಿ ಅಪಾರ ಆಸಕ್ತಿಯನ್ನು ಹೊಂದಿದ್ದಾರೆ. ಬಹುಮುಖ ಪ್ರತಿಭೆಯ, ಕ್ರಿಯಾಶೀಲ, ಸ್ನೇಹಜೀವಿ ವ್ಯಕ್ತಿತ್ವ ಹೊಂದಿರುವ ಬಾಳೀಕಾಯಿ ಅವರು ಇನ್ನು ಅನೇಕ ವರ್ಷ ಆರೋಗ್ಯದಿಂದ ಬಾಳಲಿ, ಕಲಾವಿದರಿಗೆ ಮಾರ್ಗದರ್ಶನ ನೀಡಲೆಂದು ಹಾರೈಸುವೆ.

ಈ ಕೃತಿಯನ್ನು ಬರೆಯಲು ನನಗೆ ಅವಕಾಶ ಮಾಡಿಕೊಟ್ಟಿರುವ ಕರ್ನಾಟಕ ಲಲಿತಕಲಾ ಅಕಾಡೆಮಿಗೆ ನನ್ನ ಕೃತಜ್ಞತೆಗಳು.

ಸುರೇಶ ಡಿ. ಹಾಲಭಾವಿ



ಧರ್ಮಸಮನ್ವಯ / Religious tolerance



ಎಂ.ಆರ್. ಬಾಳೀಕಾಯಿ / M.R. Balikai

ಸುರೇಶ ಡಿ. ಹಾಲಭಾವಿ




ಸಾಂಸ್ಕೃತಿಕ ರಾಜಧಾನಿ ಧಾರವಾಡದಲ್ಲಿ ೧೯೪೬ರಲ್ಲಿ ಜನಿಸಿದ ಶ್ರೀ ಸುರೇಶ್ ಡಿ. ಹಾಲಭಾವಿ ಅವರು ತಂದೆಯವರಿಂದಲೇ ಕಲಾ ಶಿಕ್ಷಣ ಪಡೆದವರು. ತಂದೆ ಶ್ರೀ ಡಿ.ವಿ. ಹಾಲಭಾವಿ ಅವರು ಉತ್ತರ ಕರ್ನಾಟಕಕ್ಕೇ ಪ್ರಪ್ರಥಮವಾಗಿ ೧೯೩೫ರಲ್ಲಿ ಕಲಾಶಾಲೆಯನ್ನು ತೆರೆದವರಲ್ಲದೆ ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ ವಿಜೇತರರೂ ಹೌದು. ಅವರಿಂದಲೇ ಕಲಾ ಶಿಕ್ಷಣ ಪಡೆದಿದ್ದಲ್ಲದೆ ಅವರು ಸ್ಥಾಪಿಸಿದ ಕಲಾ ಶಾಲೆಯನ್ನು ೧೯೮೦ ರಿಂದ ಯಶಸ್ವಿಯಾಗಿ ಮುಂದುವರಿಸುತ್ತಿದ್ದಾರೆ. ಉತ್ತರ ಕರ್ನಾಟಕದ ಹಳೆಯ ಸಮಕಾಲೀನ ಹಾಗೂ ಮುಂದಿನ ಪೀಳಿಗೆಯ ನೂರಾರು ಕಲಾವಿದರ, ಸಾಹಿತಿ, ಸಹೃದಯರ ನಿಕಟ ಪರಿಚಯ ವಿರುವ ಶ್ರೀ ಸುರೇಶ್ ಹಾಲಭಾವಿ ಅವರು ಒಂದು ಕಾಲಘಟ್ಟದ ಹಾಗೂ ಪ್ರದೇಶದ ಕಲೆಯ ಬಗ್ಗೆ ಆಳವಾದ ಪರಿಣಿತಿಯುಳ್ಳವರು. ಸ್ವಭಾವತಃ ಸಂಕೋಚದ, ಮಿತಭಾಷಿಯಾದ ಶ್ರೀಯುತರು ವಿನಯ ಸಂಪನ್ನರು.

ಕಲಾ ಡಿಪ್ಲೊಮೊದಲ್ಲಿ ಪ್ರಥಮ ರ್‍ಯಾಂಕ್ ಪಡೆದಿರುವುದಲ್ಲದೆ ಕಲಾ ಶಿಕ್ಷಕರ ತರಬೇತಿ, ವಾಣಿಜ್ಯ ಕಲೆಯಲ್ಲಿ ತರಬೇತಿ ಹಾಗೂ ಛಾಯಾಚಿತ್ರ ಕಲೆಯನ್ನು ಅಭ್ಯಸಿಸಿದ್ದಾರೆ. ಈ ವರೆಗೆ ಹಲವಾರು ಕಲಾಪ್ರದರ್ಶನಗಳಲ್ಲಿ ಕಲಾ ಶಿಬಿರಗಳಲ್ಲಿ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿರುವ ಶ್ರೀಯುತರು ಆಕಾಶವಾಣಿಯಲ್ಲಿ ಸಂದರ್ಶನಗಳು, ಕಲೆ ಕುರಿತು ಉಪನ್ಯಾಸಗಳನ್ನು ನೀಡಿದ್ದಾರೆ. ಪತ್ರಿಕೆಗಳಿಗೆ, ನೆನಪಿನ ಹಾಗೂ ಗೌರವ ಗ್ರಂಥಗಳಿಗೆ ಲೇಖನಗಳನ್ನು ಬರೆದಿದ್ದಾರೆ. ಮುಖ್ಯವಾಗಿ ೧೯೯೭ರಲ್ಲಿ ಭಾರತದ ಸ್ವಾತಂತ್ರ್ಯದ ಸುವರ್ಣ ವರ್ಷ ಮಹೋತ್ಸವದ ಅಂಗವಾಗಿ ದಕ್ಷಿಣ ಆಫ್ರಿಕಾದ ಡರ್ಬನ್‌ನಲ್ಲಿ ಭಾರತ ಸರ್ಕಾರದಿಂದ ನಡೆದ ಉತ್ಸವದಲ್ಲಿ "ಭಾರತದ ಸಮಕಾಲೀನ ಕಲೆ" ಕುರಿತು ಉಪನ್ಯಾಸ ನೀಡಿ ಬಂದಿದ್ದಾರೆ. ಭಾರತೀಯ ಸಾಂಪ್ರದಾಯಿಕ ನೃತ್ಯ ಸಂಗೀತಗಳಲ್ಲೂ ಪರಿಣತಿ ಇವರಿಗಿದೆ. ಹಲವಾರೂ ಕಡೆಗಳಲ್ಲಿ ಇವರ ಕೃತಿಗಳ ಸಂಗ್ರಹವಿದೆ. ಪ್ರಸ್ತುತ ಅಕಾಡೆಮಿಯ ಸದಸ್ಯರಾಗಿರುವ ಶ್ರೀ ಸುರೇಶ್ ಡಿ. ಹಾಲಭಾವಿ ಅವರು ಕಲಾವಿದ ಶ್ರೀ ಬಾಳೀಕಾಯಿ ಅವರನ್ನು ತೀರ ಹತ್ತಿರದಿಂದ ಬಲ್ಲವರಾಗಿ ಕೃತಿ ರಚಿಸಿ ನೀಡಿದ್ದಾರೆ.


ಮಹಾವೀರ ರಾಯಪ್ಪ ಬಾಳೀಕಾಯಿ

ಕಲಾವಿದನ ಮನಸ್ಸಿನ ನೆರಳೇ ಕಲೆ. ಕಲಾವಿದನ ಅಂತರಾತ್ಮನ ಪ್ರತಿಭೆಯೇ ಕಲೆಯ ಪ್ರತಿಭೆ. ಕಲಾವಿದನು ಎಷ್ಟು ಸುಸಂಸ್ಕೃತನಾಗಿ, ವಿಚಾರಪರನಾಗಿ, ಧ್ಯಾನಮಗ್ನನಾಗಿದ್ದರೆ, ಕಲೆಯು ಅಷ್ಟು ಸುಂದರವೂ, ಶಕ್ತಿಯುತವೂ, ಪ್ರಚೋದಕವೂ ಆಗಿರುತ್ತದೆ.

ಕಲೆ ಮತ್ತು ಕಲಾವಿದರ ವಿಚಾರ ಪ್ರಸ್ತಾಪಿಸುತ್ತ ಕಲೆಯ ಉದ್ದೇಶವನ್ನು ಸ್ವಲ್ಪ ವಿಚಾರ ಮಾಡುವುದೊಳ್ಳೆಯದು. ಬೈರೋವನ್ನನೆಂಬ ಸುಪ್ರಸಿದ್ಧ ಕವಿ-ಗಾಯಕನು, ದೃಶ್ಯ-ಅದೃಶ್ಯ ಲೋಕಗಳೆರಡಕ್ಕೂ ಯಾವುದು ಸೇತುವೆ ಕಟ್ಟುವುದೋ ಅದೇ ಕಲೆಯೆಂದು, ಹೇಳಿದ್ದಾನೆ. ಅಲ್ಲದೆ ಜನಸಾಮಾನ್ಯರಿಗೆ ಗೋಚರಿಸದಿರುವ ಸೃಷ್ಟಿ ವೈಚಿತ್ರ್ಯವನ್ನು ತನ್ನ ತಪೋಬಲದಿಂದ ಸಾಧಿಸಿಕೊಂಡಿರುವವರು ಇತರರಿಗೆ ಅವುಗಳ ಅರಿವನ್ನುಂಟುಮಾಡಿಕೊಡುವುದೇ ಅವರ ಧರ್ಮ. ಹೊಸ ನೋಟಗಳನ್ನು ತೋರಿಸುವುದು ಮಾತ್ರವಲ್ಲದೇ ಹಳೆಯ ನೋಟಗಳ ಮೇಲೆ ಹೊಸ ಬೆಳಕನ್ನು ಬೀರಿ ಅವುಗಳನ್ನು ತನಗರಿವಾದ ರೀತಿಯಲ್ಲಿ ತೋರುವುದೇ ಅವರ ಕರ್ತವ್ಯವಾಗಿದೆ. ಸೃಷ್ಟಿಯು ಸುಂದರಮಯ, ಕುರೂಪವೆಂಬುದು ಮಾನವನ ಒಡಕು ಸೃಷ್ಟಿ ಎಂದಿದ್ದಾರೆ. ನಿಸರ್ಗವು ಕ್ಷಣ ಕ್ಷಣಕ್ಕೂ ತನ್ನ ಸುಂದರ ಸಂಕೇತಗಳ ಮೂಲಕ ಮಾನವ ವರ್ಗಕ್ಕೆ ಒಂದಿಲ್ಲೊಂದು ಉಪದೇಶವನ್ನು ಕೊಡುತ್ತಲೇ ಇರುತ್ತದೆ. ಸಣ್ಣದರಿಂದ ಹಿಡಿದು ದೊಡ್ಡದಾದ ವಿಷಯುದವರೆಗೂ ಪ್ರತಿಯೊಂದು ವಿಚಾರದಲ್ಲಿಯೂ ಸೌಂದರ್ಯವಿರುತ್ತದೆ.



ತನ್ನ ಕಣ್ಣಿಗೆ ಕಾಣುವ, ಗೋಚರಿಸುವ ಸುಂದರ ಪದಾರ್ಥಗಳನ್ನು ತಾನು ಸೃಷ್ಟಿಸಿ ನೋಡಬೇಕೆಂಬುದು ಮಾನವನಲ್ಲಿ ಲೀನವಾಗಿರುವ ಸಹಜಗುಣ. ಜಗತ್ತು ಎಂದು ಸೃಷ್ಟಿಯಾಯಿತೋ ಅಂದೇ ಈ ಭಾವನೆಯು ಸೃಷ್ಟಿಯಾಯಿತೆಂದು ನಾವು ಸ್ಥೂಲವಾಗಿ ಅರಿತುಕೊಳ್ಳಬಹುದು. ಭಾರತೀಯ ಚಿತ್ರಕಲೆಯು ತನ್ನ ಕಣ್ಣಿಗೆ ಕಾಣುವ ವಿಷಯಗಳನ್ನು ಚಿತ್ರಿಸುವವರ ಕಡೆಗೆ ಮಾತ್ರವೇ ಲಕ್ಷಗೊಡಲಿಲ್ಲ. ಮನಸ್ಸಿಗೆ ತೋರುವ ವಿಚಾರಗಳನ್ನು ಚಿತ್ರಿಸುವುದರ ಕಡೆಗೂ ಲಕ್ಷ್ಯಗೊಟ್ಟಿತು. ಸತ್ಯ ಸೌಂದರ್ಯಗಳಿಗೆ ರೂಪಕೊಡುವುದೇ ಕಲೆ. ಗಗನದಲ್ಲಿ ಹಾರಿಹೋಗುವ ನೀಲಮೇಘಗಳನ್ನು ಕುಶಲ ಕುಂಚಿಗನು ಚಿತ್ರಿಸಿ ಸ್ಥಿರ ರೂಪವನ್ನು ಕೊಡುವಂತೆ ಅವ್ಯಕ್ತ ವಿಷಯಗಳ ಸುವರ್ಣ ಸರೋವರದಂತಿರುವ ಸತ್ಯ ಸೌಂದರ್ಯಗಳನ್ನು ಬಗೆಬಗೆಯ ಅಚ್ಚಿನಲ್ಲಿ ಹೊಯ್ದು ಬಗೆ-ಬಗೆಯ ಮೂರ್ತಿಗಳನ್ನು ಮಾಡಿಕೊಡುವುದೇ ಕಲೆ. ಗ್ರೀಕ್ ಮತ್ತು ಭಾರತೀಯ ಕಲೆಗಳ ವಿಚಾರ ಪ್ರಸ್ತಾಪಿಸುತ್ತ ಸ್ವಾಮಿ ವಿವೇಕಾನಂದರು ಗ್ರೀಕ್ ಕಲೆಯ ರಹಸ್ಯವೆಂದರೆ ನಿಸರ್ಗಾನುಕರಣ. ಭಾರತೀಯ



ಕಾಂಕ್ರೀಟ್ ಜಂಗಲ್

Concrete Jungle

ಕಲೆಯ ರಹಸ್ಯವೆಂದರೆ ಆದರ್ಶಗಳ ಪ್ರದರ್ಶನ. ನಿಜವಾದ ಕಲೆಯನ್ನು ಒಂದು ಕಮಲಪುಷ್ಪಕ್ಕೆ ಹೋಲಿಸಬಹುದು. ಭೂಮಿಯಲ್ಲಿಯೇ ಜನಿಸಿ, ಅಲ್ಲೇ ಬೆಳೆದು, ಪುಷ್ಪ ಹೊಂದಿದರೂ ಅದು ಭೂಮಿಯ ಮೇಲಿರುವುದಿಲ್ಲ. ಹಾಗೆಯೇ ಕಲೆಯು ನಿಸರ್ಗದ ಸಂಪರ್ಕದಲ್ಲಿರಬೇಕು.

ಪ್ರತಿಯೊಂದು ಕ್ಷಣವೂ ಮಾನವನ ಪ್ರಗತಿ ಜೀವನದಲ್ಲಿ ಅತ್ಯಮೂಲ್ಯವಾದುದು. ಪ್ರತಿಯೊಬ್ಬ ವ್ಯಕ್ತಿಯ ಕೃತಿಗಳೂ ಅವನ ಏಳು-ಬೀಳುಗಳನ್ನು ಕುರಿತ ಸೂಚನೆಗಳು. ಜೀವನದಲ್ಲಿ ಮಾನವನು ಬೆಳೆಯುತ್ತಾ ಬೆಳೆಯುತ್ತಾ ತನ್ನ ಮುಂದಿರುವ ತೆರೆಗಳನ್ನು ನಿವಾರಿಸುತ್ತಾ ಹಾರಾಡಲು ವಿಶಾಲವಾದ ಆಗಸವನ್ನೇರ್ಪಡಿಸಿಕೊಳ್ಳಬೇಕು. ಇದು ಕಲಾವಿದ ಎಂ.ಆರ್ ಬಾಳೀಕಾಯಿ ಅವರ ವಿಚಾರಧಾರೆಗಳು. ಈ ಹಿನ್ನೆಲೆಯಲ್ಲಿಯೇ ಅವರ ಕೃತಿಗಳೂ ರಚನೆಗೊಂಡಿವೆ ಎಂದರೆ ತಪ್ಪಿಲ್ಲ.

ಬೆಳಗಾವಿ ಜಿಲ್ಲೆ, ಹುಕ್ಕೇರಿ ತಾಲೂಕಿನ ಹೆಬ್ಬಾಳದಲ್ಲಿ ೧.೬.೧೯೪೧ರಂದು ಮಹಾವೀರ ರಾಯಪ್ಪ ಬಾಳೀಕಾಯಿ ಅವರ ಜನನವಾಯಿತು. ತಾಯಿ ಅಮ್ಮವ್ವ ಹಾಗೂ ತಂದೆ ರಾಯಪ್ಪ ಬಡ ಕೃಷಿಕರು. ವಂಶಪಾರಂಪಾರ್ಯವಾಗಿ ಬಂದಿದ್ದ ಬಾಳೇತೋಟದ ಹಾಗೂ ಅದರ ವ್ಯಾಪಾರದಿಂದ ಮನೆತನಕ್ಕೆ ಬಂದ ಹೆಸರು 'ಬಾಳೀಕಾಯಿ'. ಕುಲದ ಹೆಸರಿನ ಜೊತೆಗೆ 'ಮಹಾವೀರ' ಬಂದಾಗಲೇ ಇವರು ಜೈನ ಸಮುದಾಯದವರೆಂದು ತಿಳಿಯಬೇಕು. ಭಾರತೀಯ ಚಿತ್ರ, ಶಿಲ್ಪ, ವಾಸ್ತು ಕಲಾಪ್ರಪಂಚಕ್ಕೆ ಜೈನ ಸಮುದಾಯದ ಕಾಣಿಕೆ ಅತ್ಯಂತ ಮಹತ್ತರವಾದುದು. ಉಳಿದ ಬಹಳಷ್ಟು ಕಲಾವಿದರಂತೆ ಬಾಳೀಕಾಯಿ ಅವರಿಗೂ ಬಾಲ್ಯದಲ್ಲಿಯೇ ಕಲೆಯ ಬಗ್ಗೆ ಆಸಕ್ತಿ ಇದ್ದರೂ ಕ್ರಮಬದ್ಧವಾಗಿ ಕಲಿಯಲಾರದಂತಹ ಪರಿಸ್ಥಿತಿ. ಹೆಬ್ಬಾಳ, ಸಂಕೇಶ್ವರಗಳಲ್ಲಿ ಮಾಧ್ಯಮಿಕ ಪ್ರೌಢ ಶಾಲಾ ವ್ಯಾಸಂಗ ಮಾಡಿದ್ದು, ಶಾಲೆಯಲ್ಲಿ ಚಿತ್ರಕಲೆಯನ್ನು ಒಂದು ಐಚ್ಛಿಕ ವಿಷಯವಾಗಿ ತೆಗೆದುಕೊಂಡಿದ್ದರು. ಶಾಲೆಯಲ್ಲಿ ಹಾಗೂ ಬಿಡುವಿನ ವೇಳೆಯಲ್ಲಿ ಚಿತ್ರಶಿಲ್ಪ, ಕರಕುಶಲ ವಸ್ತುಗಳನ್ನು ನಿರ್ಮಿಸಿ ಕಲಾಭಿರುಚಿ ಬೆಳೆಸಿಕೊಂಡರು ಹಾಗೂ ಡ್ರಾಯಿಂಗ್ ಲೋಯರ್ ಮತ್ತು ಹೈಯರ್ ಗ್ರೇಡ್ ಪರೀಕ್ಷಗಳನ್ನು ಮಾಡಿದರು.

ಕಲಾ ಶಿಕ್ಷಣ

ಮಹಾವೀರರು ಮುಂದೆ ಚಿತ್ರಕಲಾ ಅಭ್ಯಾಸ ಮಾಡಲು ಗದುಗಿನ ವಿಜಯ ಕಲಾ ಮಂದಿರದಲ್ಲಿ ಪ್ರವೇಶ ಪಡೆದರು. ಆಗ ದಿನಪತ್ರಿಕೆಗಳಲ್ಲಿ ರ‍್ಯಾಂಕ್ ಬಂದ ವಿದ್ಯಾರ್ಥಿಗಳ ಹೆಸರು ಮತ್ತು ಫೋಟೋ ಪ್ರಕಟವಾಗಿದ್ದನ್ನು ನೋಡಿ, ಅವರುಗಳು, ಗದುಗಿನ ವಿಜಯ ಕಲಾ ಮಂದಿರದವರೆಂದು ಗೊತ್ತಾದ ಕಾರಣ ಅಲ್ಲಿಯೇ ಪ್ರವೇಶ ಪಡೆಯಲು ಪ್ರೇರಣೆಯಾಯಿತು.

ಅವರ ಅಣ್ಣನವರಾದ ಬಾಬುರಾವ್ ಬಾಳೀಕಾಯಿಯವರು ಇವರನ್ನು ಕರೆದುಕೊಂಡು ಹೋಗಿ ಪ್ರಾಚಾರ್ಯ ಟಿ.ಪಿ. ಅಕ್ಕಿಯವರನ್ನು ಬೇಟಿಯಾದರು. ಚಿಕ್ಕವಯಸ್ಸು ಮತ್ತು ಸಣ್ಣ ಕಾಯದವರಾದ ಮಹಾವೀರನನ್ನು ಅಕ್ಕಿಯವರು ನೋಡಿ 'ಈತನು ಬಹಳ ಚಿಕ್ಕವನಿದ್ದಾನೆ, ಇಲ್ಲಿಯ ಅಭ್ಯಾಸ ಈತನಿಗೆ ಬಹಳ ಭಾರವಾಗಬಹುದು' ಎಂದು ಪ್ರವೇಶಕ್ಕೆ ನಿರಾಕರಿಸಿದರಾದರೂ, ಇವರ ಅಣ್ಣನವರು, ಅಕ್ಕಿಯವರನ್ನು ಬಹಳ ವಿನಂತಿಸಿಕೊಂಡಾಗ ಅವರು ಒಪ್ಪಿದರು. ಮುಂದೆ ಇವರು ಬಹಳ ಆಸ್ಥೆಯಿಂದ ವಿಧೇಯರಾಗಿ ಕೆಲಸ ಮಾಡಹತ್ತಿದರು. ಇವರ ಮಿತ್ರರಾದ ತಮ್ಮಣ್ಣ ಹತ್ತಿಯವರು ಇವರನ್ನು ತಮ್ಮ ರೂಮಿನಲ್ಲಿ ಇಟ್ಟುಕೊಂಡು ಎಲ್ಲ ರೀತಿಯಿಂದ ಇವರಿಗೆ ಸಹಾಯ ಮಾಡಿದರು. ೧೯೬೨ರಲ್ಲಿ ಡಿ.ಟಿ.ಸಿ. ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದು ಕಲಾ ಶಾಲೆಗೆ ಕೀರ್ತಿಯನ್ನು ತಂದರು. ಈ ವಿದ್ಯಾರ್ಥಿಯು ತನ್ನ ಗುಣಗಳಿಂದ ಅಕ್ಕಿಯವರಿಂದ ಪ್ರೀತಿಯ ವಿದ್ಯಾರ್ಥಿ ಎನಿಸಿಕೊಂಡನು. ಡಾ॥ ಬಿ.ಕೆ. ಹಿರೇಮಠ, ಬಿ.ಜಿ. ವಾರಿಯವರು ಪೇಟಿಂಗ್ ಕ್ಲಾಸಿನಲ್ಲಿ ಓದುತ್ತಿದ್ದರು. ಶ್ರೀಯುತರಾದ ಸಿ.ಎನ್. ಪಾಟೀಲ, ವ್ಹಿ.ಟಿ. ಕಾಳೆ, ಎನ್.ಎಸ್. ಶಿಲ್ಪಿ, ಕಮಾನಗಾರ ಇವರು ಗುರುಗಳಾಗಿದ್ದರು. ಮುರಿಗೆಪ್ಪ ಚಿಟ್ಟಿಯವರು ಆಗಾಗ ಕ್ಲಾಸ್ ತೆಗೆದುಕೊಳ್ಳುತ್ತಿದ್ದರು.



೨೯-೧೨-೧೯೬೯ ರಂದು ರಂಗೋಲಿಯಿಂದ ಟಿ.ಪಿ. ಅಕ್ಕಿ ಅವರ ಭಾವಚಿತ್ರ ರಚಿಸುತ್ತಿರುವ ಬಾಳೀಕಾಯಿಯವರು

T.P. Akki's portrait in rangoli by Balikai on 29-12-1969

ಅವರ ಸಂಪರ್ಕದಲ್ಲಿದ್ದುಕೊಂಡು ಅವರಿಂದ ಬಹಳಷ್ಟು ಬೆಳೆಯಲಿಕ್ಕೆ ಸಾಧ್ಯವಾಯಿತೆಂದು ಮಹಾವೀರರು ಸ್ಮರಿಸುತ್ತಾರೆ. ೧೯೬೨ರಲ್ಲಿ ಇಂಟರ್ ಮೀಡಿಯಟ್ ಪೇಟಿಂಗ್ ವರ್ಗದಲ್ಲಿ ಓದುತ್ತಿದ್ದರು. ಆಗ ಚಿತ್ರದುರ್ಗ ವಿಭಾಗದವರು "ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್" ಮುಖಾಂತರ ಚಿತ್ರಕಲಾ ಶಿಕ್ಷಕರ ಹುದ್ದೆಗೆ ಶಿಕ್ಷಕರನ್ನು ಕಳಿಸಲು ಅಕ್ಕಿಯವರಿಗೆ ಕೇಳಿಕೊಂಡಾಗ ಅವರು ಬಾಳೀಕಾಯಿಯವರು ಮತ್ತು ಎನ್.ಬಿ. ಸುಂಕದ ಅವರ ಹೆಸರುಗಳನ್ನು ಸೂಚಿಸಿದರು. ಆಗ ಈ ಕಲಾ ಶಾಲೆಯಿಂದ ಚಿತ್ರಕಲಾ ಶಿಕ್ಷಕರಾಗಿ ಆ ವರ್ಷಕ್ಕೆ ನೇಮಕಗೊಂಡವರು ಇವರಿಬ್ಬರೇ. ಇದಕ್ಕಾಗಿ ಅಕ್ಕಿಯವರನ್ನು ಇವರು ಕೃತಜ್ಞತಾಪೂರ್ವಕವಾಗಿ ನೆನೆಸುತ್ತಾರೆ.

ವೃತ್ತಿ ಜೀವನ

ಬಾಳೀಕಾಯಿಯವರು ಹಾಸನ ಜಿಲ್ಲೆಯ, ಅರಸೀಕೆರೆ ತಾಲೂಕಿನ ಬಾಣವರದ ಸರಕಾರಿ ಪ್ರೌಢ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರೆಂದು ೩೧.೧೦.೧೯೬೨ರಂದು ನೌಕರಿಯನ್ನು ಪ್ರಾರಂಭಿಸಿದರು. ಇವರ ಸರಳ, ಸ್ನೇಹಮಯ ಸ್ವಭಾವ ಹಾಗೂ ನಿಸ್ವಾರ್ಥ ಸೇವೆಯಿಂದ ಅಲ್ಲಿಯ ವಿದ್ಯಾರ್ಥಿಗಳ, ಸಹೋದ್ಯೋಗಿಗಳ ಮತ್ತು ಊರ ಜನರ ಪ್ರೀತಿಗೆ ಪಾತ್ರರಾದರು. ಅಲ್ಲಿಯ ವಿದ್ಯಾರ್ಥಿಗಳನ್ನು, ಸಿಬ್ಬಂದಿಯವರನ್ನು ಮತ್ತು ಊರಲ್ಲಿನ ಕಲಾಸಕ್ತ ವ್ಯಕ್ತಿಗಳನ್ನು ಲೋಯರ್ ಮತ್ತು ಹೈಯರ್ ಡ್ರಾಯಿಂಗ್ ಗ್ರೇಡ್ ಪರೀಕ್ಷೆಗಳಿಗೆ ಕೂಡಿಸಿ ನೂರಕ್ಕೆ ನೂರು ಫಲಿತಾಂಶ ಬರುವಂತೆ ಮಾಡುತ್ತಿದ್ದರು. ಇವರ ಉತ್ಸಾಹ, ಕಾರ್ಯ ಮಾಡುವ ಪ್ರವೃತ್ತಿಯನ್ನು ನೋಡಿ ಊರ ಜನರು ಸಂತೋಷಪಟ್ಟು ಇವರನ್ನು ಅನೇಕ ಸಲ ಸನ್ಮಾನಿಸಿ ಗೌರವಿಸಿದ್ದಾರೆ. ಮುಂದೆ ಅಲ್ಲಿಂದ ವರ್ಗ ಮಾಡಿಸಿಕೊಳ್ಳುವುದು ಬಾಳೀಕಾಯಿಯವರಿಗೆ ಬಹಳ ಕಠಿಣವಾಯಿತು. ಕಾರಣ ಊರ ಜನರು ಇವರನ್ನು ಬಿಟ್ಟುಕೊಡಲು ಇಷ್ಟಪಡಲಿಲ್ಲ. ಈಗಲೂ ಅಲ್ಲಿಯ ಜನ ಹಾಗೂ ವಿದ್ಯಾರ್ಥಿಗಳು ಇವರನ್ನು ಬಹಳ ಗೌರವದಿಂದ ಕಾಣುತ್ತಾರೆ. ಅಲ್ಲಿದ್ದಾಗ ಪ್ರತಿ ವರ್ಷ ಚಿತ್ರಕಲಾ ಪ್ರದರ್ಶನಗಳನ್ನು ಮಾಡುವುದು, ರಂಗೋಲಿ ಹಾಕುವುದು ದಸರಾ ಕಲಾ ಪ್ರದರ್ಶನದಲ್ಲಿ ಪ್ರತಿವರ್ಷ ಪ್ರಶಸ್ತಿಗಳನ್ನು ಪಡೆಯುತ್ತಿದ್ದುದನ್ನು ಕಂಡ ಟಿ. ರಾಮಯ್ಯ, ಆಗಿನ ಡಿ.ಡಿ.ಪಿ.ಐ. ಸಾಹೇಬರು ದೇವನೂರಿನ ಶ್ರೀ ಲಕ್ಷ್ಮೀ ದೇವಸ್ಥಾನದಲ್ಲಿ ಜೈಮಿನಿ ಮಹಾಭಾರತದ ಕೆಲವು ದೃಶ್ಯಗಳನ್ನು ತೈಲ ವರ್ಣದ ಭಿತ್ತಿ ಚಿತ್ರಗಳನ್ನು ಚಿತ್ರಿಸಲು ವಿನಂತಿಸಿದರು. ಈ ಕಲಾಕೃತಿಗಳು ಈಗಲೂ ನೋಡಲು ನಿಗುವವು.

ದೇವನೂರಿನ ಲಕ್ಷ್ಮೀ ದೇವಸ್ಥಾನದಲ್ಲಿ ಬಿತ್ತಿಚಿತ್ರ ರಚಿಸುತ್ತಿರುವ ಬಾಳೀಕಾಯಿ

Mural painting at Lakshmidevi temple, Devanur by Balikai



೧೯೭೦ರಲ್ಲಿ ಧಾರವಾಡ ಸರಕಾರಿ ಹೆಣ್ಣು ಮಕ್ಕಳ ಟ್ರೇನಿಂಗ್ ಕಾಲೇಜಿಗೆ ಬಾಳೀಕಾಯಿಯವರಿಗೆ ವರ್ಗವಾಯಿತು. ಅಲ್ಲಿಯೂ ತಮ್ಮ

ಕಾರ್ಯವನ್ನು ಬಹಳ ಚೆನ್ನಾಗಿ ಮಾಡುತ್ತ ಬಂದರು. ಹೆಣ್ಣು ಮಕ್ಕಳಿಗಾಗಿ ಡ್ರಾಯಿಂಗ್ ಲೋಯರ್ ಮತ್ತು ಹೈಯರ್ ಗ್ರೇಡ್ ಪರೀಕ್ಷೆಗಳನ್ನು ನಡೆಸುವ ಪ್ರತ್ಯೇಕ ಪರೀಕ್ಷಾ ಕೇಂದ್ರವನ್ನು ಪ್ರಾರಂಭಮಾಡಿಸಿದರು. ಅಲ್ಲಿಯ ಸಿಬ್ಬಂದಿಯವರು ಕೂಡ ಇವರಿಂದ ಬೋಧನೆಪಡೆದು ಈ ಪರೀಕ್ಷೆಗಳಿಗೆ ಕುಳಿತು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗುತ್ತಿದ್ದರು. ಹೀಗೆ ಇಲ್ಲಿಯೂ ಉತ್ತಮ ಸೇವೆಯನ್ನು ಸಲ್ಲಿಸುತ್ತ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.



ಸರ್ಕಾರಿ ಚಿತ್ರಕಲಾ ಶಾಲೆಯಲ್ಲಿ ೧೩-೩-೧೯೮೩ರಂದು ನೀಡಿದ ಪ್ರಾತ್ಯಕ್ಷಿಕೆ

Portrait demonstration at Govt. Fine Art School on 13-3-1983

ಗಂಡು ಮಕ್ಕಳ ಸರಕಾರಿ ಟ್ರೇನಿಂಗ್ ಕಾಲೇಜಿನ ಅಧೀನದಲ್ಲಿದ್ದ ಫೈನ್ ಆರ್ಟ್ಸ್ ವಿಭಾಗಕ್ಕೆ ೧೯೭೩ರಲ್ಲಿ ಬಾಳೀಕಾಯಿಯವರು ವರ್ಗವಾಗಿ ಬಂದರು. ಆಗ ಅಲ್ಲಿದ್ದ ಡ್ರಾಯಿಂಗ್ ಮಾಸ್ತರರು ನಿವೃತ್ತಿಯಾಗಿದ್ದರಿಂದ ಆ ವಿಭಾಗದಲ್ಲಿ ಕಾರ್ಯ ಚಟುವಟಿಕೆಗಳು ಸ್ಥಗಿತಗೊಂಡಿದ್ದವು. ಅಲ್ಲಿಯ ಮಕ್ಕಳಿಗೆ ಲೋಯರ್ ಮತ್ತು ಹೈಯರ್ ಡ್ರಾಯಿಂಗ್ ಗ್ರೇಡ್ ಪಾಠ ಹೇಳುತ್ತ ಕಲೆಯಲ್ಲಿ ಅವರನ್ನು ತರಬೇತಿಗೊಳಿಸುತ್ತಿದ್ದರು. ಉತ್ತರ ಕರ್ನಾಟಕದಲ್ಲಿ ೧೯೩೫ರಲ್ಲಿ ಪ್ರಪ್ರಥಮವಾಗಿ ಸ್ಥಾಪಿಸಲ್ಪಟ್ಟ ಧಾರವಾಡದ ಚಿತ್ರಕಲಾ ಶಾಲೆಯ (ಸ್ಕೂಲ್ ಆಫ್ ಆರ್ಟ್) ಸಂಸ್ಥಾಪಕರಾದ ಡಿ.ವ್ಹಿ. ಹಾಲಭಾವಿ ಗುರುಗಳೊಂದಿಗೆ ಹಾಗೂ ಅವರು ಸ್ಥಾಪಿಸಿದ ಕಲಾಶಾಲೆಯೊಂದಿಗೆ ಮತ್ತು ೧೯೭೧ರಲ್ಲಿ ಎನ್.ಜಿ. ಬಡಿಗೇರ ಅವರು ಪ್ರಾರಂಭಿಸಿದ 'ಭಾರತೀಯ ಕಲಾ ಕೇಂದ್ರ' ಸಂಸ್ಥೆಯೊಂದಿಗೂ ಒಳ್ಳೆಯ ಸಂಪರ್ಕ ಇಟ್ಟುಕೊಂಡಿದ್ದರು ಮತ್ತು ಗುರುಗಳ ಮಾರ್ಗದರ್ಶನ ಪಡೆಯುತ್ತಿದ್ದರು.

ಬಾಳೀಕಾಯಿಯವರು ಸರಕಾರಿ ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜಿನಲ್ಲಿದ್ದಾಗ ಮೇಲಾಧಿಕಾರಿಗಳ ಅಪ್ಪಣೆ ಪಡೆದು ೧೯೭೧ರಲ್ಲಿ ಡಿ.ವ್ಹಿ. ಹಾಲಭಾವಿಯವರ ಮಾರ್ಗದರ್ಶನದಲ್ಲಿ ಅವರ ಇಚ್ಛೆಯಂತೆ 'ಸ್ಕೂಲ್ ಆಫ್ ಆರ್ಟ್'ದಿಂದ ಡ್ರಾಯಿಂಗ್ ಮಾಸ್ಟರ್ ಕೋರ್ಸ್ ಪರೀಕ್ಷೆಗೆ ಕುಳಿತುಕೊಂಡು ರಾಜ್ಯಕ್ಕೆ ಪ್ರಥಮ ಸ್ಥಾನಪಡೆದರು. ೧೯೬೬ರಲ್ಲಿ ವಿಜಯ ಕಲಾ ಮಂದಿರ, ಗದಗದಿಂದ ಡಿಪ್ಲೊಮಾ ಪೇಟಿಂಗ್ ಪರೀಕ್ಷೆಗೆ ಕುಳಿತು ರಾಜ್ಯಕ್ಕೆ ೨ನೇ ರ್‍ಯಾಂಕ್ ಪಡೆದಿದ್ದರು. ೧೯೭೨ರಲ್ಲಿ ಭಾರತೀಯ ಕಲಾ ಕೇಂದ್ರದಿಂದ ಆರ್ಟ್ ಮಾಸ್ಟರ್ ಪರೀಕ್ಷೆ ಕುಳಿತು ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದರು. ಹೀಗೆ ಕಲೆಯನ್ನು ಚೆನ್ನಾಗಿ ಅಭ್ಯಾಸ ಮಾಡಿ ಜ್ಞಾನವನ್ನು ಸಂಪಾದಿಸಿ ಒಬ್ಬ ಶ್ರೇಷ್ಠ ಕಲಾವಿದ ಎಂದೆನಿಸಿಕೊಂಡಿದ್ದಾರೆ. ಸರಕಾರಿ ಚಿತ್ರಕಲಾ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಅವಧಿಯಲ್ಲಿ ಇವರು ಬಹಳಷ್ಟು ಕೆಲಸಗಳನ್ನು ಮಾಡಿದ್ದಾರೆ. ಶ್ರದ್ಧೆ, ಪ್ರಾಮಾಣಿಕತನದಿಂದ ತಮ್ಮ ಉಪನ್ಯಾಸಕ ವೃತ್ತಿ ಮಾಡುವುದರ ಜೊತೆಗೆ ಅನೇಕ ಪ್ರದರ್ಶನ, ವಿಚಾರ ಸಂಕೀರ್ಣಗಳಂತಹ ಕಲಾ ಚಟುವಟಿಕೆಗಳಲ್ಲಿ ತಾವು ಸಕ್ರಿಯವಾಗಿ ಭಾಗವಹಿಸುವುದಲ್ಲದೇ ಉಳಿದ ಸಿಬ್ಬಂದಿಯವರನ್ನು, ವಿದ್ಯಾರ್ಥಿಗಳನ್ನು ಭಾಗವಹಿಸುವಂತೆ ಪ್ರೇರೇಪಿಸುತ್ತಿದ್ದರು. ಇವರು ತಮ್ಮ ಸಿಬ್ಬಂದಿಯವರ ಜೊತೆಗೆ, ಬೇರೆ ಕಲಾಶಾಲೆಗಳ ಸಿಬ್ಬಂದಿಗಳು ಹಾಗೂ ಮೇಲಾಧಿಕಾರಿಗಳ ಜೊತೆಗೆ, ಹೀಗೆ ಎಲ್ಲರ ಜೊತೆಗೆ ಒಳ್ಳೆಯ ಸಂಬಂಧವಿಟ್ಟುಕೊಂಡಿದ್ದರು.

ವಿಶೇಷವಾಗಿ ವಿದ್ಯಾರ್ಥಿಗಳ ಮೇಲೆ ಮಮತೆ, ಅವರ ಬಗ್ಗೆ ಕಳಕಳಿ, ಅವರ ಏಳ್ಗೆಯ ಬಗ್ಗೆ ಸದಾ ಚಿಂತನಶೀಲರಾಗಿದ್ದಾರೆ. ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳಂತೆಯೇ ಕಂಡು ಆರ್ಥಿಕವಾಗಿ ಸಹಾಯ ಸಹಕಾರವನ್ನು ನೀಡುತ್ತ ಬಂದಿದ್ದಾರೆ. ಹೀಗಾಗಿ ವಿದ್ಯಾರ್ಥಿಗಳಿಗೂ ಇವರು ಅಚ್ಚುಮೆಚ್ಚಿನ ಗುರುಗಳಾಗಿದ್ದಾರೆ. ಈಗಲೂ ಇವರನ್ನು ಬಹಳ ಗೌರವದಿಂದ ಕಾಣುತ್ತಾರೆ. ತಮ್ಮ ಸೇವೆಯ ಅವಧಿಯಲ್ಲಿ ತಮಗೆ ಸಹಾಯ, ಸಹಕಾರ ನೀಡಿದ ಎಲ್ಲರನ್ನೂ ಕೃತಜ್ಞಾಪೂರ್ವಕವಾಗಿ ಬಾಳಿಕಾಯಿಯವರು ನೆನೆಯುತ್ತಾರೆ. ಟ್ರೇನಿಂಗ್ ಕಾಲೇಜಿನ ಪ್ರಾಚಾರ್ಯರುಗಳನ್ನು ಅವರಲ್ಲಿ ವಿಶೇಷವಾಗಿ ಶಿವಶಂಕರ ಹಿರೇಮಠ ಇವರನ್ನು ವಿಶೇಷವಾಗಿ ಗೌರವಿಸುತ್ತಾರೆ. ಬಾಳೀಕಾಯಿಯವರು ವಿದ್ಯಾರ್ಥಿಗಳಿಗಷ್ಟೇ ಅಲ್ಲದೆ, ಕಲಾವಿದರಿಗೆ, ಆಪ್ತರಿಗೆ, ಬಂಧುಗಳಿಗೆ, ಸಮಾಜಕ್ಕೆ ಸಹಾಯ ಬೇಕೆಂದಾಗ ಯಾವಾಗಲೂ ತಮ್ಮಿಂದ ಸಾಧ್ಯವಾದಷ್ಟು ಸಹಾಯ ಸಲ್ಲಿಸುತ್ತಾ ಬಂದಿದ್ದಾರೆ. ಇವರು ಸೇವೆಯಲ್ಲಿದ್ದಾಗ ತಮ್ಮ ಅನೇಕ ಸಂಬಂಧಿಗಳಿಗೆ, ತಮ್ಮ ಮನೆಯಲ್ಲಿ ಇರಿಸಿಕೊಂಡು ಅವರಿಗೆ ಶಿಕ್ಷಣ ಕೊಡಿಸುವುದಕ್ಕೆ ಎಲ್ಲ ರೀತಿಯಿಂದ ಸಹಾಯ, ಸಹಕಾರ ಕೊಟ್ಟಿದ್ದರ ಪರಿಣಾಮವಾಗಿ ಇಂದು ಅವರೆಲ್ಲ ಒಳ್ಳೆಯ ಉದ್ಯೋಗದಲ್ಲಿದ್ದು, ಉತ್ತಮ ಜೀವನವನ್ನು ಸಾಗಿಸುತ್ತಿದ್ದಾರೆ.

ಧಾರವಾಡದ ಸರಕಾರಿ ಚಿತ್ರಕಲಾ ಮಹಾವಿದ್ಯಾಲಯದ ರೂವಾರಿ

ಬಾಳೀಕಾಯಿಯವರು ಆಗಸ್ಟ್ ೧೯೭೩ರಲ್ಲಿ ಧಾರವಾಡದ ಹೆಣ್ಣುಮಕ್ಕಳ ಸರಕಾರಿ ಟ್ರೇನಿಂಗ್ ಕಾಲೇಜಿನಿಂದ ಸರಕಾರಿ ಗಂಡು ಮಕ್ಕಳ ಕಾಲೇಜಿನ ಚಿತ್ರಕಲಾ ವಿಭಾಗಕ್ಕೆ ವರ್ಗವಾಗಿ ಬಂದರು. ಅಲ್ಲಿದ್ದ ಚಿತ್ರಕಲಾ ಶಿಕ್ಷಕರು ಮೊದಲೇ ನಿವೃತ್ತರಾಗಿದ್ದರು. ಹಾಗಾಗಿ ಕಲಾ ಚಟುವಟಿಕೆಗಳು ನಿಂತುಹೋಗಿದ್ದವು. ಬಾಳೀಕಾಯಿಯವರಿಗೆ ಟ್ರೇನಿಂಗ್ ಕಾಲೇಜಿನಲ್ಲಿ ಹೆಚ್ಚು ಸಂಬಳ ಸಿಗುತ್ತಿತ್ತು. ಇಲ್ಲಿ ಕಡಿಮೆ, ಆದರೂ ಇಲ್ಲಿ ಏನಾದರೂ ಬದಲಾವಣೆ ಮಾಡಬೇಕೆಂಬ ಇಚ್ಛೆಯಿಂದ ಮತ್ತು ಮನೋಧಾರ್ಯದಿಂದ ಇಲ್ಲಿ ಕೆಲಸ ಮಾಡಲು ಒಪ್ಪಿಕೊಂಡರು. ಇಲ್ಲಿಯ ಪ್ರಾಚಾರ್ಯರಾಗಿದ್ದ ಹ.ಗ. ಜೋಶಿಯವರೂ ಇವರೂ ಸೇರಿ ಸಮಾಲೋಚನೆ ಮಾಡಿ, ವಿದ್ಯಾರ್ಥಿಗಳನ್ನು ಕೂಡಿಸುವುದು ಸಮಸ್ಯೆಯಾಗಿದ್ದರಿಂದ ಟ್ರೇನಿಂಗ್ ಕಾಲೇಜಿನ ಶಿಕ್ಷಕ ವಿದ್ಯಾರ್ಥಿಗಳಿಗೂ, ಸುತ್ತ ಮುತ್ತಲಿನ ಶಾಲೆಗಳ ವಿದ್ಯಾರ್ಥಿಗಳಿಗೂ ಚಿತ್ರಕಲೆಯನ್ನು ಕಲಿಸಬೇಕೆಂದು ನಿರ್ಧರಿಸಿದರು. ಇವರೇ ಬಣ್ಣ, ಹಾಳೆಗಳನ್ನು ಕೊಟ್ಟು ವರ್ಗಗಳನ್ನು ಪ್ರಾರಂಭಿಸಿದರು. ಲೋಯರ್ ಮತ್ತು ಹೈಯರ್ ಗ್ರೇಡ್ ಡ್ರಾಯಿಂಗ್ ಪರೀಕ್ಷೆಗಳಿಗೂ ವಿದ್ಯಾರ್ಥಿಗಳನ್ನು ಕೂಡಿಸುತ್ತಿದ್ದರು. ಸಾಕಷ್ಟು ವಿದ್ಯಾರ್ಥಿಗಳು

ಧಾರವಾಡ ಬಳಿಯ ಒಂದು ಭೂದೃಶ್ಯ

Landscape near Dharwad



ಉತ್ಸಾಹದಿಂದ ಬರಹತ್ತಿದರು. ಜೋಶಿಯವರು ನಿವೃತ್ತರಾಗಿ ಶಿವಶಂಕರ ಹೀರೇಮಠ ಅವರು ಪ್ರಾಚಾರ್ಯರಾಗಿ ಬಂದರು. ಅವರಿಂದಲೂ ಬಾಳೀಕಾಯಿಯವರಿಗೆ ಮಾರ್ಗದರ್ಶನ ದೊರೆಯಿತು.

೧೯೭೫ರಿಂದ ಐದು ವರ್ಷಗಳ ಡಿಪ್ಲೊಮಾ ವರ್ಗಗಳನ್ನು ಪ್ರಾರಂಭಿಸಿದರು. ಟ್ರೇನಿಂಗ್ ಕಾಲೇಜಿನ ಚಿತ್ರಕಲಾ ಶಿಕ್ಷಕರನ್ನು ಇಲ್ಲಿ ಕಲಿಸಲು ವ್ಯವಸ್ಥೆ ಮಾಡಿದರು. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಾ ಬಂದಿತು. ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ಮತ್ತು ಈ ವಿದ್ಯಾಲಯದ ಆವರಣದಲ್ಲಿ ಪ್ರತಿವರ್ಷ ಕಲಾ ಪ್ರದರ್ಶನಗಳನ್ನು ಏರ್ಪಡಿಸುತ್ತಿದ್ದರು. ಲಲಿತ ಕಲಾ ಅಕಾಡೆಮಿಗಳಿಗೆ ಪ್ರತಿವರ್ಷ ಕಲಾಕೃತಿಗಳನ್ನು ಪ್ರದರ್ಶನಕ್ಕೆ ಕಳಿಸುತ್ತಿದ್ದರು. ಬೆಳಗಾಂವಿ ವಿಭಾಗದಲ್ಲಿ ಹೆಚ್ಚಿಗೆ ಇರುವ ಚಿತ್ರಕಲಾ ಶಿಕ್ಷಕರನ್ನು ಇಲ್ಲಿಗೆ ವರ್ಗಾವಣೆ ಮಾಡಿಕೊಡಬೇಕೆಂದು ಪ್ರಾಚಾರ್ಯರು ಸರಕಾರಕ್ಕೆ ಕೇಳಿಕೊಳ್ಳುತ್ತಿದ್ದರು. ವಿದ್ಯಾರ್ಥಿಗಳಿಗೆ ಹಾಸ್ಟೆಲಿನ ವ್ಯವಸ್ಥೆಯನ್ನು ಮಾಡಿಕೊಟ್ಟರು. ಹಿರೇಮಠ ನಂತರ ಶಂಕರ ಬಟ್ಟೂರ ಅವರು ಪ್ರಾಚಾರ್ಯರಾಗಿ ಬಂದರು. ಅವರ ಮಾರ್ಗದರ್ಶನದಲ್ಲಿ ಡಿ.ಎಮ್.ಸಿ. ವರ್ಗಗಳು ಪ್ರಾರಂಭಗೊಂಡವು. ಅವರ ನಂತರ ಡಿ.ಬಿ. ಯಲ್ಲರೆಡ್ಡಿಯವರು ಬಂದರು. ಅವರ ಅವಧಿಯಲ್ಲಿ ಆರ್ಟ್ ಮಾಸ್ಟರ್ ವರ್ಗಗಳನ್ನು ಪ್ರಾರಂಭಮಾಡಿದರು. ಹೀಗೆ ಎಲ್ಲ ಪ್ರಾಚಾರ್ಯರುಗಳ ಸಿಬ್ಬಂದಿಗಳ ಮನವೊಲಿಸಿ, ಮನವರಿಕೆಯಾಗುವ ಹಾಗೆ ತಿಳುವಳಿಕೆ ಕೊಟ್ಟು ಬಾಳೀಕಾಯಿಯವರು ಪ್ರಗತಿಯನ್ನು ಸಾಧಿಸಿದರು. ನಂತರ ಬಂದ ಪ್ರಾಚಾರ್ಯ ಎಮ್.ಎಸ್. ಪಾಟೀಲರು ಅಲ್ಲಿ ಶಾಶ್ವತವಾಗಿ ಕಲಾಕೃತಿಗಳು ಪ್ರದರ್ಶನಗೊಳ್ಳಲಿಕ್ಕೆ ಒಂದು ಪ್ರತ್ಯೇಕ ಕೊಠಡಿಯ ವ್ಯವಸ್ಥೆ ಮಾಡಿಕೊಟ್ಟರು.



'ನನ್ನ ಮಗು'
ಜಲವರ್ಣದ ಕಲಾಕೃತಿ

'My Child'
Water colour
composition

ಧಾರವಾಡ ಸರಕಾರಿ ಆರ್ಟ ಗ್ಯಾಲರಿಯ ಮುಖ್ಯ ಚೇತನ

ಧಾರವಾಡಕ್ಕೆ ಒಂದು ಸುಸಜ್ಜಿತವಾದ ಆರ್ಟ್ ಗ್ಯಾಲರಿಯ ಅವಶ್ಯಕತೆ ಇದೆ ಎಂದು ಮೊದಲಿನಿಂದಲೂ ಹಿರಿಯ ಕಲಾವಿದ ಡಿ.ವ್ಹಿ. ಹಾಲಭಾವಿಯವರು ಸರಕಾರವನ್ನು ಒತ್ತಾಯಿಸುತ್ತಲೇ ಇದ್ದರು. ಧಾರವಾಡಕ್ಕೆ ಜಿಲ್ಲಾಧಿಕಾರಿಗಳಾಗಿ ಬಂದ ಆರ್.ಬಿ. ಅಗವನೆಯವರಿಂದ ಅದಕ್ಕೆ ಚಾಲನೆ ಸಿಕ್ಕಿತು. ಅವರು ಮಹಿಳಾ ಕಲಾವಿದೆಯವರಿಂದ ಒಂದು ಚಿತ್ರಕಲಾ ಶಿಬಿರ ಹಾಗೂ ಪ್ರದರ್ಶನವನ್ನು ಮಾಡಿಸಿದರು. ಕೃತಿಗಳ ಮಾರಾಟದಿಂದ ಬಂದ ಹಣವನ್ನು ಗ್ಯಾಲರಿಗೆ ಬಳಸಲು ಸಲಹೆ ಮಾಡಿದರು. ನಂತರ ಬಂದ ಸಂಜೀವ ಕುಮಾರ ಅವರು ಹೆಚ್ಚಿನ ಆಸಕ್ತಿಯನ್ನು ವಹಿಸಿ ಸ್ಥಳೀಯ ಎಲ್ಲ ಕಲಾವಿದರ ಜೊತೆಗೆ ಸಭೆಗಳನ್ನು ಮಾಡಿ, ಬಾಳೀಕಾಯಿಯವರಿಗೆ ಹಣಕಾಸಿನ ಜವಾಬ್ದಾರಿಯನ್ನು ವಹಿಸಿಕೊಟ್ಟು, ಟ್ರೇನಿಂಗ್ ಕಾಲೇಜಿನ ಅಧೀನದಲ್ಲಿರುವ ಎರಡು ಕೊಠಡಿಯಲ್ಲಿ (ಧಾರವಾಡ ಆರ್ಟ್ ಸೆಂಟರ್) ಸರಕಾರಿ ಆರ್ಟ್ ಗ್ಯಾಲರಿಯನ್ನು ಪ್ರಾರಂಭಿಸಿದರು. ಸುಮಾರು ೪ ರಿಂದ ೫ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕೊಠಡಿಗಳನ್ನು ವಿದ್ಯುತ್ ದೀಪ, ಚಿತ್ರ ತೂಗಿಬಿಡಲು ವಿಶೇಷ ರೀತಿಯ ಹ್ಯಾಂಗರ್ ನೆಲಹಾಸು ಇತ್ಯಾದಿಗಳಿಂದ ಸಜ್ಜುಗೊಳಿಸಿ, ಕಲಾ ಕೃತಿಗಳನ್ನು

ಪ್ರದರ್ಶಿಸಲು ಯೋಗ್ಯವಾದ ರೀತಿಯಲ್ಲಿ ಮಾಡಿಸಿಕೊಟ್ಟರು. ಅದರ ಉಸ್ತುವಾರಿಯನ್ನು ಬಾಳೀಕಾಯಿಯವರಿಗೆ ವಹಿಸಿಕೊಟ್ಟರು. ಅವರು ನಿವೃತ್ತರಾಗುವವರೆಗೆ ಅದನ್ನು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಬಂದಿದ್ದು, ಇಂದಿಗೂ ಮುಂದುವರಿದಿದೆ.

ಚಿತ್ತಾರ ಆರ್ಟ್ ಗ್ಯಾಲರಿ ಮತ್ತು ಗ್ರಾಫಿಕ್ಸ್, ಧಾರವಾಡ

ಬಾಳೀಕಾಯಿಯವರು, ತರುಣ ಕಲಾವಿದರಾದ ಬಿ. ಮಾರುತಿ, ಸಂಗ್ರಾಮ, ರಮೇಶ ಬಾಳೀಕಾಯಿಯವರು ಕೂಡಿಕೊಂಡು 'ಚಿತ್ತಾರ ಆರ್ಟ್ ಗ್ಯಾಲರಿ ಮತ್ತು ಗ್ರಾಫಿಕ್ಸ್' ವಿಭಾಗವನ್ನು ಧಾರವಾಡದಲ್ಲಿ ೨೬.೧೨.೨೦೦೧ರಂದು ಪ್ರಾರಂಭಿಸಿದರು. ಸಾಮಾನ್ಯ ಜನರಲ್ಲಿ ಕಲಾಭಿರುಚಿ ಹುಟ್ಟಿಸುವುದು; ಚಿಕ್ಕ ಮಕ್ಕಳಿಗೆ, ತರುಣ ಕಲಾವಿದರಿಗೆ ಚಿತ್ರಕಲೆಯ ಬಗ್ಗೆ ರಾಜ್ಯ, ರಾಷ್ಟ್ರ ಮಟ್ಟದ ಸ್ಪರ್ಧೆ, ಪ್ರದರ್ಶನಗಳನ್ನು ಏರ್ಪಡಿಸಿ ಪ್ರೋತ್ಸಾಹ ನೀಡುವುದು, ಅಶಕ್ತ ಕಲಾವಿದರಿಗೆ ಸಹಾಯ ನೀಡುವುದು, ಹಿರಿಯ ಕಲಾವಿದರನ್ನು ಗೌರವಿಸುವುದು ಹೀಗೆ ಹತ್ತು ಹಲವಾರು ಧ್ಯೇಯೋದ್ದೇಶಗಳನ್ನು ಇಟ್ಟುಕೊಂಡಿದ್ದು ಯಶಸ್ವಿಯಾಗಿ ನೆಡಯುತ್ತಿದೆ. ಈ ಗ್ಯಾಲರಿಯ ಗ್ರಾಫಿಕ್ಸ್ ವಿಭಾಗವನ್ನು ರಮೇಶ ಬಾಳೀಕಾಯಿಯವರು ಚೆನ್ನಾಗಿ ನೋಡಿಕೊಳ್ಳುತ್ತಾ ಹೊರಟಿದ್ದಾರೆ. ಇಲ್ಲಿ ಕಲಾವಿದರ ಕಲಾಕೃತಿಗಳನ್ನು ಸಂಗ್ರಹಿಸಿ ಮಾರಾಟ ಮಾಡುವ ಕಾರ್ಯ ಕೂಡ ನಡೆಯುತ್ತಿದೆ. ಈ ಕಲಾಕೃತಿಗಳನ್ನು ಅಂತರ್‌ಜಾಲದಲ್ಲಿ (ಇಂಟರ್‌ನೆಟ್) ಕೂಡ ಅಳವಡಿಸಲಾಗಿದೆ.

ಕನ್ನಡ ವಿಶ್ವವಿದ್ಯಾಲಯ, ಹಂಪಿಯಲ್ಲಿ ಸೇವೆ

೨೦೦೧ರಿಂದ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಶಿಲ್ಪ ಮತ್ತು ಚಿತ್ರಕಲಾ ವಿಭಾಗ ಬನಶಂಕರಿ - ಬಾದಾಮಿಯಲ್ಲಿ ಗೌರವ ಚಿತ್ರಕಲಾ ಉಪನ್ಯಾಸಕರಾಗಿ ಸೇವೆ ಮಾಡಲು ಅವಕಾಶ ಇವರಿಗೆ ಸಿಕ್ಕಿತು. ಈ ಸಂಸ್ಥೆಯ ಮುಖ್ಯಸ್ಥರಾದ ಡಾ|| ಎಸ್.ಸಿ. ಪಾಟೀಲರೊಂದಿಗೆ ಸೇವೆ ಮಾಡುತ್ತಲಿದ್ದಾರೆ. ಚಿತ್ರಕಲಾ ವಿಷಯುಗಳಿಗೆ ಸಂಬಂಧಿಸಿದ ಪಿಎಚ್.ಡಿ. ಹಾಗೂ ಎಂ.ಫಿಲ್ ವಿದ್ಯಾರ್ಥಿಗಳ ಸಂಗ ಬೆಳೆದು ಸಾಹಿತ್ಯಕ ಸಂಶೋಧನಾ ಗ್ರಂಥಗಳು ಹೇಗೆ ಮಾಡುತ್ತಾರೆ ಎಂಬ ಮಾಹಿತಿಗಳು ಕೂಡಾ ಇವರಿಗೆ ಲಭಿಸಿದವು. ಪುನರ್ ಚೇತನ, ಎಂಬ ಕನ್ನಡ ವಿಶ್ವವಿದ್ಯಾಲಯದ ಒಂದು ತಿಂಗಳ ಕಾರ್ಯಕ್ರಮದಲ್ಲಿ ಕೋಲಾಜ ಕಲೆಯ ವಿಷಯಕ್ಕೆ ಉಪನ್ಯಾಸ ನೀಡುವ ಅವಕಾಶ ಇವರಿಗೆ ಒದಗಿ ಬಂದಿತು.



ಕನ್ನಡ ವಿಶ್ವವಿದ್ಯಾಲಯ, ಹಂಪಿಯಲ್ಲಿ ಪ್ರಾತ್ಯಕ್ಷಿಕೆ ನೀಡುತ್ತಿರುವ ಬಾಳೀಕಾಯಿ

Portrait demonstration at Kannada University, Hampi

ಇಲ್ಲಿ ಇದ್ದಾಗಲೇ ಇವರಿಗೆ ಕರ್ನಾಟಕ ಲಲಿತಕಲಾ ಅಕಾಡೆಮಿಯು ಹಾಸನದಲ್ಲಿ ೨೦೦೨ನೇ ಸಾಲಿನ ವಾರ್ಷಿಕ ಕಲಾ ಪ್ರದರ್ಶನದಲ್ಲಿ ಆಹ್ವಾನಿತ ಹಿರಿಯ ಕಲಾವಿದರೆಂದು ಕರೆದು ಇವರ ಕಲಾಕೃತಿಗಳನ್ನು ಪ್ರದರ್ಶಿಸಿದವು. ಇವರ ಜೊತೆಗೆ ಶ್ರೀಕಾಂತ ಶೆಟ್ಟಿ ಮತ್ತು ಕೆ.ಟಿ. ಶಿವಪ್ರಕಾಶ ಅವರೂ ಆಹ್ವಾನಿತ ಕಲಾವಿದರಾಗಿದ್ದರು. ಕರ್ನಾಟಕ ಹಿರಿಯ ಕಲಾವಿದರೆಂದು ಆಲ್ ಇಂಡಿಯಾ ಫೈನ್ ಆರ್ಟ್ ಮತ್ತು ಕ್ರಾಫ್ಟ್ ಸೊಸೈಟಿ, ನ್ಯೂ ಡೆಲ್ಲಿಯಲ್ಲಿ ೨೦೦೨ನೇ ಸಾಲಿನಲ್ಲಿ ಇವರ ಕಲಾಕೃತಿಗಳನ್ನು ಪ್ರದರ್ಶಿಸಿ ಸನ್ಮಾನ ಮಾಡಿ ಬೆಳ್ಳಿಯ ಫಲಕ ನೀಡಿದರು. ಈ ಗೌರವಕ್ಕೆ ಕರ್ನಾಟಕದಿಂದ ಹಿರಿಯ ಕಲಾವಿದರಾದ ಮತ್ತು ಸಧ್ಯ ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಪೀಟರ್ ಲೂಯಿಸ್ ಮತ್ತು ಬಾಳೀಕಾಯಿಯವರು ಆಯ್ಕೆಯಾಗಿದ್ದರು. ಕನ್ನಡ ವಿಶ್ವವಿದ್ಯಾಲಯದಲ್ಲಿ ವಿಶ್ವಭಾರತಿಯವರು ರಾಷ್ಟ್ರಮಟ್ಟದ ಕಲಾ ಶಿಬಿರ ಏರ್ಪಡಿಸಿದ್ದು ಕಲಾವಿದರಾಗಿ ಭಾಗವಹಿಸಿ ಕೃತಿರಚನೆ ಮಾಡಿದರು.

ಕನ್ನಡ ವಿಶ್ವವಿದ್ಯಾಲಯದ ನುಡಿ ಹಬ್ಬದ ಕಲಾಶಿಬಿರದಲ್ಲಿ ಭಾಗವಹಿಸಿ ಕಲಾಕೃತಿಗಳನ್ನು ಪ್ರದರ್ಶನ ಮಾಡಿದ್ದಾರೆ. ಇಲ್ಲಿ ಇವರು ಕಲಿಸುವುದರ ಜೊತೆಗೆ ಇತರ ಅವಕಾಶಗಳು ದೊರೆಯುತ್ತಲಿವೆ. ಇವರ ಹಲವಾರು ಲೇಖನಗಳು, ಕೆಲವು ಪುಸ್ತಕಗಳಲ್ಲಿ, ಪತ್ರಿಕೆಗಳಲ್ಲಿಯು ಪ್ರಕಟವಾಗುತ್ತಲಿವೆ.




ಜೀವನ ನಿರ್ವಹಣೆ

Family Responsibility

ಕಲಾಕೃತಿಗಳ ಹರವು

ಬಾಳೀಕಾಯಿ ಅವರು ತೈಲವರ್ಣ, ಜಲವರ್ಣ, ಅಕ್ರಾಲಿಕ, ಗ್ಲಾಸ್ ಪೇಂಟ್, ಆಯಿಲ್ ಪೇಸ್ಟಲ್ಸ್, ಡ್ರೈ ಪೇಸ್ಟಲ್ಸ್, ಫ್ಯೂಜಿಕಲರ್, ಇಂಡಿಯನ್ ಇಂಕ್, ಪ್ರಿಂಟಿಂಗ್ ಇಂಕ್ಸ್, ಚಾರ್ಕೋಲ್ ಮುಂತಾದ ಮಾಧ್ಯಮಗಳ ಬಣ್ಣಗಳಲ್ಲಿ ಚಿತ್ರರಚನೆ ಮಾಡಿದ್ದಾರೆ. ಕೋಲಾಜ, ಗ್ಲಾಸ್ ಪೇಂಟಿಂಗ್, ಪೆನ್ಸಿಲ್, ಆಯಿಲ್ ಕಲರ್ ಪೇಪರ್, ಕ್ಯಾನ್ವಾಸ್ ಕ್ಲಾಥ್, ಗೋಡೆಗಳ ಮೇಲೆ, ಹ್ಯಾಂಡ್ ಮೇಡ್ ಪೇಪರ್, ನಾರ್ವೆ ಸ್ಕ್ಯಾಂಟ್ ಪೇಪರ್‌ಗಳಲ್ಲಿ ಕಲಾಕೃತಿಗಳ ರಚನೆ ಮಾಡಿದ್ದಾರೆ. ಸೆರಿಗ್ರಾಫಿ, ಸ್ಕ್ರೀನ್‌ಪ್ರಿಂಟಿಂಗ್ ಕೂಡ ಮಾಡಿದ್ದಾರೆ.

ತಮ್ಮದೇ ಆದ ರೂಪಗಳನ್ನೂ ರಚಿಸಿ ಬಣ್ಣಗಾರಿಕೆಯಿಂದ, ಬ್ರೆಶ್ ಹಾಗೂ ನೈಫ್ ಮತ್ತು ಪೆನ್ಸಿಲ್ ಮತ್ತು ಪೆನ್‌ಗಳ ಬಹಳ ಜಾಗರೂಕತೆಯ ಬಳಕೆಯಿಂದ ತಮ್ಮದೇ ಆದ ತಂತ್ರಗಾರಿಕೆಯಿಂದ ರಚಿಸಿದ್ದಾರೆ. ಇದು ಅಲ್ಲದೆ ಕೋಲಾಜದಲ್ಲಿ ಬಣ್ಣ ಬಣ್ಣಗಳ ತುಂಡು



ಪೇಪರ್‌ಗಳನ್ನು ಅಂಟಿಸಿ ಕಲಾಕೃತಿ ರಚಿಸಿದ್ದಾರೆ. ಇವರು ಜಲವರ್ಣದಲ್ಲಿ ಬಳಸುವ ತಂತ್ರಗಾರಿಕೆಯನ್ನು ರೂಢಿಸಿಕೊಂಡಿದ್ದಾರೆ. ಮತ್ತು ಪೇಂಟಿಂಗ್‌ಗಳಲ್ಲಿ ಮೈವಳಿಕೆಗಳ ಸಲುವಾಗಿ ಯಾವಾಗಲೂ ಹೊಸ ಪ್ರಯೋಗಗಳನ್ನು ಮಾಡುತ್ತಲಿರುತ್ತಾರೆ.

ಕಲಾಕೃತಿಗಳ ಪ್ರಮುಖ ಧೋರಣೆ

ಯಾವುದೇ ಮಾಧ್ಯಮದಲ್ಲಿ ಪೋಟ್ರೇಟ್ ಮಾಡುವುದರಲ್ಲಿ ಇವರು ಸಿದ್ಧಹಸ್ತರು. ಈ ವಿಷಯಕ್ಕೆ ಸಂಬಂಧಿಸಿದಂತೆ ವ್ಯಕ್ತಿಯ ಘನ ಆಕಾರ, ಅನಾಟಮಿಕಲ್ ಸ್ಟೆಕ್ಚರ್‌ಗಳಿಗೆ ಸ್ಪಷ್ಟವಾದ ಬಣ್ಣಗಳಿಂದ ನೆರಳು ಬೆಳಕಿನ ಪ್ರಭಾವಗಳಿಗೆ ಹೆಚ್ಚು ಒತ್ತು ಕೊಡುವರು. ಅನಾಟಮಿಕಲ್ ಪ್ರಮಾಣ ಬದ್ಧತೆಗೆ ಅಷ್ಟೇ ಮಹತ್ವಕೊಟ್ಟು ಹಿನ್ನೆಲೆ ಮತ್ತು ಮುನ್ನೆಲೆಗಳಿಗೆ ಸಂಯೋಜನಾ ದೃಷ್ಟಿಯಿಂದ ಬಹಳ ಗಮನ ಕೊಡುವರು. ಇವರು ಚಿತ್ರಗಳಲ್ಲಿ ಸಾಮಾಜಿಕ ಘೋಷಣೆಗಳ ಧೋರಣೆಯನ್ನು ಇಟ್ಟುಕೊಂಡಿರುವುದು ಹೆಚ್ಚಾಗಿ ಕಂಡುಬರುವುದು. ಕಲಾಕೃತಿಗಳನ್ನು ನೈಜತೆಯಿಂದ ಕೂಡಿಕೊಂಡಿರುವಂತೆ ಕಲಾಕೃತಿಗಳಿಗೆ ಮಹತ್ವ ಕೊಡುತ್ತ ಬಂದಿದ್ದಾರಾದರೂ ಅಮೂರ್ತ ಕಲೆಗಳಿಗೂ ಹೆಚ್ಚು ಗಮನ ಹರಿಸುತ್ತಿದ್ದಾರೆ. ಇವರು ಎಲ್ಲ ವರ್ಣಗಳ ಮಾಧ್ಯಮಗಳಲ್ಲಿಯೂ ಅಮೂರ್ತತೆಯ ಹುಡುಕಾಟದಲ್ಲಿದ್ದಾರೆ. ರೇಖೆಗಳಲ್ಲಿ ಮುಖಗಳ ಸ್ಕೆಚ್‌ಗಳಂತೂ ವಿಶೇಷ ರೀತಿಯಲ್ಲಿ ಕೆಲಸ ಮಾಡುತ್ತಲಿದ್ದಾರೆ. ಜಾನಪದ ಚಿತ್ರಕಲಾಕೃತಿಗಳಿಗೆ ಕೈ ಹಾಕಿದ್ದಾರೆ. ಕೆಲವೊಮ್ಮೆ ಧಾರ್ಮಿಕ ಚಿತ್ರಗಳಲ್ಲಿಯೂ ಗಮನಹರಿಸಿದ್ದಾರೆ. ಆಕ್ರಂದನಗೈಯ್ಯುತ್ತಿರುವ ಕೆಲವು ಮುಖಭಾವದ ಚಿತ್ರಗಳನ್ನು ರಚಿಸಿದ್ದು, ಅವು ಎಡ್ವರ್ಡ್‌ಮಂಕ್‌ನ 'ಚೀತ್ಕಾರ' ಚಿತ್ರವನ್ನು ಬಹಳವಾಗಿ ಹೋಲುತ್ತವೆ. ಒಟ್ಟಿನಲ್ಲಿ ಈ ಚಿತ್ರಕಲಾ ಮಾಧ್ಯಮದಿಂದ ಅಂತರಾಳದ ಸಂವೇದನೆಗಳಿಗೆ, ಸಾಹಿತ್ಯಿಕ ಭಾವನೆಗಳಿಗೆ ಸ್ಪಂಧಿಸುವಂಥ ಚಿತ್ರರಚನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಒಬ್ಬ ಕಲಾವ್ಯಕ್ತಿ ಇದರಲ್ಲಿ ಇನ್ನೂ ತಿಳಿದುಕೊಳ್ಳುವುದು ಆಳ ಬಹಳ ವಿದೆ. ಇದರಲ್ಲಿ ವೇಳೆ ಹಾಳುಮಾಡದೇ ಇದರಲ್ಲಿ ತನ್ಮಯವಾಗಿ ಆನಂದಿಸಬೇಕೆಂಬುದೇ ಇವರ ಹಿರಿದಾದ ಬಯಕೆ.

ಬಹುಮುಖ ಪ್ರತಿಭೆ

ಬಾಳೀಕಾಯಿಯವರು ತಮ್ಮನ್ನು ಒಬ್ಬ ಕಲಾವಿದನಾಗಿ ಬೆಳೆಯಲು ಅನೇಕ ಮಹಾನುಭಾವರ ಆದರ್ಶ ಹಾಗೂ ಬದುಕು ಇವರಿಗೆ ಪ್ರೇರಣೆ ನೀಡಿವೆ ಎಂದು ಭಾವಿಸುತ್ತಾರೆ. ಅವರಲ್ಲಿ ಇವರಿಗೆ ಮೆಚ್ಚುಗೆಯಾದವರು - ಮೈಕಲೆಂಜಲೊ, ಲಿಯೋನಾರ್ಡೊ ಡ-ವಿಂಚಿ, ರೆಂಬ್ರಾಂಟ್, ಪಿಕಾಸೋ, ವ್ಯಾನಗಾಗ್, ರವೀಂದ್ರನಾಥ ಟಾಗೋರ್, ಅಬನೀಂದ್ರನಾಥ ಟಾಗೋರ್, ಅಮೃತಾ ಶೇರಗಿಲ್, ಎನ್.ಎಸ್. ಬೇಂದ್ರೆ, ಎಮ್.ಎಫ್. ಹುಸೇನ್, ಪಿ.ಟಿ. ರೆಡ್ಡಿ, ಕೆ.ಕೆ. ಹೆಬ್ಬಾರ, ದಂಡಾವತೀಮಠ, ಮಿಣಜಿಗಿ, ಡಿ.ವ್ಹಿ. ಹಾಲಭಾವಿ, ಎಮ್.ಎ. ಚೆಟ್ಟಿ, ಎಮ್.ಆರ್. ಆಚರೇಕರ, ಆರ್.ಎಮ್. ಹಡಪದ, ಜಾನ್ ಫರ್ನಾಂಡಿಸ್‌ರಂತಹ ಮಹಾನ್ ಕಲಾವಿದರು, ಇವರಲ್ಲದೇ ಮಹಾವೀರ, ಬುದ್ದ, ಬಸವ ಮುಂತಾದ ಅನೇಕರಿಂದ ಪ್ರೇರಿತರಾಗಿದ್ದಾರೆ. ನಿರ್ಗತಿಕರ ತಾಯಿಯಾಗಿ ನಿಸ್ವಾರ್ಥ ಸೇವೆಯನ್ನು ಸಲ್ಲಿಸಿದ ಥೆರೆಸಾ ಅವರ ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ.

ಬಾಳೀಕಾಯಿಯವರು ತಮಗೆ ಕಲಾ ಶಿಕ್ಷಕ ವೃತ್ತಿ ಬಹಳಷ್ಟು ತೃಪ್ತಿ ಕೊಟ್ಟಿದೆ ಎಂದೂ ವಿದ್ಯಾರ್ಥಿಗಳ ಜೊತೆಗೆ ನಾನೂ ಬಹಳಷ್ಟು ಕಲಿತುಕೊಂಡಿದ್ದೇನೆಂದು ಹೆಮ್ಮೆಯಿಂದ ಹೇಳುತ್ತಾರೆ.

ರಂಗೋಲಿ ಕಲೆಯಲ್ಲಿ ಕೂಡಾ ಇವರು ನಿಪುಣರು, ಮೈಸೂರು ದಸರಾ ಕಲಾ ಪ್ರದರ್ಶನದಲ್ಲಿ ಸತತವಾಗಿ ಮೂರು ವರ್ಷ ಪ್ರಥಮ ಬಹುಮಾನ ಪಡೆದಿದ್ದಾರೆ. ಚಿತ್ರಕಲೆಯನ್ನು ಕಲಿಸುವುದು, ಕೃತಿಗಳನ್ನು ರಚಿಸುವುದಲ್ಲದೇ ಚಿತ್ರಕಲೆ ಕುರಿತು ಸಾಕಷ್ಟು ಲೇಖನಗಳನ್ನು ಬರೆದಿದ್ದಾರೆ.

ಬಾಳೀಕಾಯಿಯವರಿಗೆ ಸಾಹಿತ್ಯ ಹಾಗೂ ಪುಸ್ತಕಗಳ ಬಗ್ಗೆಯೂ ಅಷ್ಟೇ ಆಸಕ್ತಿ. ಒಳ್ಳೆಯ ಪುಸ್ತಕಗಳನ್ನು ಸಂಗ್ರಹಿಸುವ ಹುಚ್ಚು. ಹೀಗಾಗಿ ಇವರು ಚಿತ್ರಕಲೆ, ಕಲಾವಿದರ ಪುಸ್ತಕಗಳ ಜೊತೆಗೆ ಧಾರ್ಮಿಕ ಪುಸ್ತಕಗಳನ್ನು ಸಾಮಾನ್ಯ ಪುಸ್ತಕಗಳನ್ನು ಸಹ ಸಂಗ್ರಹಿಸಿ ಮನೆಯಲ್ಲಿ ಒಂದು ಚಿಕ್ಕ ಗ್ರಂಥಾಲಯವನ್ನೇ ಮಾಡಿಕೊಂಡಿದ್ದಾರೆ.

ಮಹಾನುಭಾವರ ಲೇಖನಗಳನ್ನು, ವಾಣಿಗಳನ್ನು ಕೂಡ ಇವರು ಸಂಗ್ರಹಿಸಿದ್ದಾರೆ.

ಮನುಷ್ಯ ಕೊನೆಯವರೆಗೆ ವಿದ್ಯಾರ್ಥಿಯಾಗಿರಬೇಕಂತೆ, ಅಂದರೆ ಮಾತ್ರ ಅವರು ಉನ್ನತಿ ಹೊಂದಲು ಸಾಧ್ಯ ಎಂದು ಹಿರಿಯರು ಹೇಳುತ್ತಾರೆ. ಬೆಳೆಯುತ್ತ ಬೆಳೆಯುತ್ತ ಸಮಾಜದಿಂದ, ವಿಚಾರವಂತರಿಂದ ಮಾರ್ಗದರ್ಶನ ಪಡೆದರೆ ಮಾತ್ರ ಮನುಷ್ಯ ಒಂದು ಗುರಿ ಮುಟ್ಟಲು ಸಾಧ್ಯ. ಬಾಳೀಕಾಯಿಯವರೂ ಇದೇ ವಿಚಾರ ಹೇಳುತ್ತಾರೆ. ನಾನು ಇನ್ನೂ ಮಾಡಬೇಕಾದದ್ದು, ಕಲಿಯಬೇಕಾದದ್ದು, ಬಹಳವಿರುತ್ತದೆ ಎಂದು.

ಅಂಧ ಗಾಯಕರು

Blind Musicians



ಇವರು ತಮ್ಮ ಶಿಕ್ಷಕ ವೃತ್ತಿಯಿಂದ ೩೧.೫.೧೯೯೯ರಂದು ನಿವೃತ್ತಿ ಹೊಂದಿದರು. ಆದರೆ ಸದಾ ಕೆಲಸಗಾರರಾಗಿರುವ ಇವರ ಮನೆಯಲ್ಲಿ ಒಂದು ಸ್ಟುಡಿಯೋವನ್ನು ಮಾಡಿಕೊಂಡು ಈಗಲೂ ಕಲಾಕೃತಿಗಳನ್ನು ರಚಿಸುತ್ತಿರುತ್ತಾರೆ. ಆಮಂತ್ರಣ ಪತ್ರಿಕೆಗಳ ಹಿಂಬದಿಯಲ್ಲಿ ಮತ್ತು ಬಸ್ ಟಿಕೆಟ್‌ಗಳ ಹಿಂಬದಿಯಲ್ಲಿ ಕೂಡ ಇವರು ಸೃಜನಾತ್ಮಕ ಲಘು ಚಿತ್ರಗಳನ್ನು ಬಿಡಿಸುತ್ತಿರುವುದನ್ನು ನೋಡಿದ್ದೇನೆ. ಹೊಸತನ್ನು ಹುಡುಕಿ, ಪ್ರಯೋಗ ಮಾಡುವ ವಿಚಾರ ಇವರದು.

ವಿವಾಹ ಮತ್ತು ಕುಟುಂಬ

ಹುಕ್ಕೇರಿ ತಾಲೂಕಿನ ಎಲಿಮುನ್ನೊಳ್ಳಿ ಗ್ರಾಮದ ನೇಮಗೌಡ ಮಲ್ಲಗೌಡನವರ ಹಾಗೂ ಅವರ ಧರ್ಮ ಪತ್ನಿ ಶ್ರೀಮತಿ ಚಂದ್ರವ್ವಾ (ಮಹಾವೀರರ ಅಕ್ಕ)

ಇವರ ಸುಪುತ್ರಿ ಚಿ.ಸೌ. ಕಸ್ತೂರಿಯವರೊಂದಿಗೆ ಮಹಾವೀರರ ಮದುವೆ ೧೯೬೪ರಲ್ಲಿ ಆಯಿತು. ಇವರು ಮಹಾವೀರರಿಗೆ ಎಲ್ಲ ರೀತಿಯಿಂದ ಸಹಕಾರ ನೀಡುತ್ತಾ ಬಂದಿದ್ದಾರೆ. ಇವರ ಏಳಿಗೆಗೆ ಕಾರಣರಾಗಿದ್ದರೆಂದು ಹೇಳಬಹುದು. ಇವರಿಗೆ ಮೂರು ಜನ ಮಕ್ಕಳು ಹಿರಿಯವನೇ ಗಂಡು ಮಗ ರಮೇಶ, ಈತನು ಆರ್ಟ್ಸ್ ಮಾಸ್ತರ ಹಾಗೂ ಪೇಂಟಿಂಗ್ ಡಿಪ್ಲೊಮಾ ಪದವೀಧರ. ಒಳ್ಳೆಯ ಫೋಟೋ ಗ್ರಾಫರ್ ಕೂಡಾ ಆಗಿರುತ್ತಾನೆ. ಈತನು ಧಾರವಾಡದಲ್ಲಿ "ಚಿತ್ತಾರ ಆರ್ಟ್ ಗ್ಯಾಲರಿ ಮತ್ತು ಗ್ರಾಫಿಕ್ಸ್"ನಲ್ಲಿ ಕಂಪ್ಯೂಟರ್ ಕೆಲಸ ಮಾಡುತ್ತಿದ್ದಾನೆ. ಈತನ ಧರ್ಮ ಪತ್ನಿ ರೇಖಾ. ಬಾಳೀಕಾಯಿಯವರಿಗೆ ಇಬ್ಬರು ಹೆಣ್ಣು ಮಕ್ಕಳು ಗಂಗಾ ಮತ್ತು ಚಂದ್ರಕಲಾ ಇಬ್ಬರನ್ನೂ ಒಳ್ಳೆ ಸಂಬಂಧ ನೋಡಿ ಮದುವೆ ಮಾಡಿ



'ಕುಟುಂಬ'
ಜಲವರ್ಣದ ಒಂದು
ಸಂಯೋಜನೆ

'Family'
Composition
Water colour

ಕೊಟ್ಟಿದ್ದಾರೆ. ಹೆಣ್ಣು ಮಕ್ಕಳು ಕೂಡಾ ಕಲೆಯಲ್ಲಿ ಆಸಕ್ತಿಯುಳ್ಳವರಾಗಿದ್ದಾರೆ. ಡ್ರಾಯಿಂಗ್ ಪರೀಕ್ಷೆಗಳನ್ನು ಪಾಸಾಗಿದ್ದಾರೆ.

ಚಿತ್ರಕಲಾ ಶಿಕ್ಷಕರಾದ ಮಹಾವೀರ ಆರ್. ಬಾಳೀಕಾಯಿಯವರು ಒಬ್ಬ ಆದರ್ಶ ಕಲಾವಿದರು ಇಂಥವರು ಸಮಾಜಕ್ಕೆ ಬಹುದೊಡ್ಡ ಆಸ್ತಿ, ಇವರ ಮಾರ್ಗದರ್ಶನ ಮುಂದಿನ ಯುವ ಪೀಳಿಗೆಗೆ ದಾರಿದೀಪವಾಗುವುದು. ಇವರಿಂದ ಇನ್ನೂ ಅನೇಕ ಕಲಾಕೃತಿಗಳು ನಾಡಿಗೆ ಸಿಗುವಂತಾಗಲಿ, ಇವರ ಕಲಾ ಸೇವೆ ಮಾದರಿಯಾಗಲಿ, ಕಲಾರಾಧಕರಾದ ಇವರು ಎಲ್ಲರ ಕಣ್ಮಣಿಯಾಗಿ ಪ್ರತಿಭಾ ಪುರಸ್ಕೃತರಾಗಲಿ ಎಂದು ಆಶಿಸುವೆ.

ಯಾವುದೇ ಆಯ್ದುಕೊಂಡ ಮಾಧ್ಯಮ ಇಂದಿನ ಹೊಸ ಅವಿಷ್ಕಾರಗಳ ಮಾಧ್ಯಮ ಹೊಸ ಹೊಸ ತಂತ್ರಜ್ಞಾನ, ವಿಜ್ಞಾನದ ಇಂದಿನ ಹೊಸ ಜಗತ್ತಿನಲ್ಲಿ ಇವುಗಳ ಸಹಾಯ ಸಹಕಾರಗಳಿಂದ ಯಾವುದೇ ರೀತಿಯಲ್ಲಿ ವ್ಯಕ್ತಿ ಹಿಂದೆ ಬೀಳದೇ ಬೆಳೆಯಲು ಸಾಧ್ಯ.

ಯಾವುದೇ ಕಲಾಕೃತಿಗಳು ಮುಂದಿನ ಪೀಳಿಗೆಗೆ ದಾರಿದೀಪವಾಗಿ ಅಜರಾಮರವಾಗಿರುತ್ತವೆ. ಇತಿಹಾಸ ನಿರ್ಮಾಣ ಮಾಡುತ್ತವೆ. ಏಕಾಗ್ರತೆ, ಸತತ ಪ್ರಯತ್ನ, ಶ್ರದ್ಧೆ, ವೇಳೆಯ ಸದುಪಯೋಗದಿಂದ ಮನಃಪೂರ್ವಕವಾಗಿ ಕೆಲಸ ಮಾಡಿದ ಎಲ್ಲರೂ ಮಹಾನುಭಾವರಾಗಲು ಸಾಧ್ಯವಿದೆ. ಗುರು-ಹಿರಿಯರು, ತಂದೆತಾಯಿಗಳು, ಗೆಳೆಯರು, ಅನುಭವಿಗಳ ಅನುಭವಗಳು ಮತ್ತು ಒಳ್ಳೇ ಪುಸ್ತಕಗಳು ನಮಗೆ ದಾರಿದೀಪ. 'ನಾನು' ಎಂಬ ಅಹಂಕಾರ ಬಿಟ್ಟು ನಾನು ಬದುಕಿರುವವರೆಗೂ ಇನ್ನೂ ಸಾಧಿಸುವುದು ಸಾಕಷ್ಟಿದೆ ಎಂಬ ಭಾವನೆಯಿಂದ ನಡೆಯಬೇಕು. ಕಲೆಗೆ ಕುಲ, ಜಾತಿ, ಧರ್ಮಗಳಿಲ್ಲ. ಆದರಂತೆ ಕಲಾವಿದನ ಬದುಕಾಗಬೇಕು ಎಂಬ ಧೋರಣೆಯಿಂದಲೇ ಯಶಸ್ವೀ ಜೀವನ ನಡೆಸುತ್ತಿದ್ದಾರೆ ಮಹಾವೀರ ಬಾಳೀಕಾಯಿಯವರು.



ಕಲಾವಿದರು ನಿಂತ ನೀರಾಗದೇ ಹರಿಯುವ ನೀರಿನಂತೆ ನಿರಂತರವಾಗಿ, ಸೃಜನಾತ್ಮಕ, ರಚನಾತ್ಮಕ, ಚಟುವಟಿಕೆಗಳಿಂದ ಯಾವುದೇ ಕಾರ್ಯವಾಗಲಿ ಅಥವಾ ಕಲಾಕೃತಿ ರಚನೆಯಾಗಲಿ ನಿರ್ವಹಿಸಬೇಕೆಂಬುದು ನನ್ನ ಹಾರೈಕೆ.

ಬಹುಮುಖ ಪ್ರತಿಭೆಯ, ಹೃದಯ ಸಿರಿವಂತಿಕೆಯ, ಸೃಜನಶೀಲ ಕಲಾವಿದ ಮಹಾವೀರ ಬಾಳೀಕಾಯಿಯವರು ಇನ್ನೂ ಅನೇಕ ವರ್ಷ ಆರೋಗ್ಯವಂತರಾಗಿ ಬಾಳಿ, ಯುವ ಕಲಾವಿದರಿಗೆ ಇವರಿಂದ ಮಾರ್ಗದರ್ಶನ ಸಿಗುವಂತಾಗಲಿ ಎಂದು ಹಾರೈಸೋಣ.



ಬಂಗಾರದ ತತ್ತಿಯ ಕೋಳಿ.... / Golden Egg laying Hen.......

ಎಂ.ಆರ್. ಬಾಳೀಕಾಯಿ ಅವರ ವ್ಯಕ್ತಿ ವಿವರ

ಜನನ - ೧.೬.೧೯೪೧ - ಹೆಬ್ಬಾಳ, ಬೆಳಗಾವಿ ಜಿಲ್ಲೆ

ತರಬೇತಿ ಪಡೆದದ್ದು

- ಚಿತ್ರಕಲಾ ಶಿಕ್ಷಕರ ಶಿಬಿರ - ಮೈಸೂರು - ೧೯೭೨
- ಡಿ.ಎಸ್.ಸಿ.ಇ.ಆರ್.ಟಿ. ಪಠ್ಯ ಪುಸ್ತಕ ಕಾರ್ಯಾಗಾರ - ಬೆಂಗಳೂರು - ೧೯೭೩
- ಎನ್.ಸಿ.ಇ.ಆರ್.ಟಿ. ಚಿತ್ರಕಲಾ ಶಿಕ್ಷಕರ ಶಿಬಿರ, ಬೆಂಗಳೂರು - ೧೯೮೬
- ಕರ್ನಾಟಕ ಲಲಿತ ಕಲಾ ಅಕಾಡೆಮಿ ಸೆರಿಗ್ರಾಫ್ ಶಿಬಿರ ಬೆಂಗಳೂರು - ೧೯೯೨.

ಏಕ ವ್ಯಕ್ತಿ ಚಿತ್ರಕಲಾ ಪ್ರದರ್ಶನಗಳು

- ಬಾಣಾವರ - ೧೯೬೨ ರಿಂದ ೧೯೭೦
- ಹಾಸನ - ೧೯೬೩
- ಅರಸೀಕೆರೆ - ೧೯೬೪
- ಹೆಬ್ಬಾಳ - ೧೯೬೯
- ಅಜ್ಜಂಪುರ, ತರೀಕೆರೆ, ಚಿಕ್ಕಮಗಳೂರು - ೧೯೬೯
- ಧಾರವಾಡ - ೧೯೭೩ ರಿಂದ ೧೯೭೯, ೯೨, ೯೫, ೯೬, ೨೦೦೦ ಮತ್ತು ೨೦೦೧
- ಬೆಂಗಳೂರು - ೧೯೯೨

ಚಿತ್ರಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದು

- ಮೈಸೂರು ದಸರಾ - ೧೯೬೭, ೬೮, ೬೯, ೮೫, ೯೪, ೯೬
- ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಳ್ಳಿಹಬ್ಬದ ಪ್ರದರ್ಶನ, ಬೆಂಗಳೂರು - ೧೯೮೭
- ಅಖಿಲ ಭಾರತ ಪ್ರದರ್ಶನ, ಧಾರವಾಡ - ೧೯೯೧
- ಕರ್ನಾಟಕ ಲಲಿತ ಕಲಾ ಅಕಾಡೆಮಿ ವಾರ್ಷಿಕ ಪ್ರದರ್ಶನ, ಬೆಂಗಳೂರು - ೧೯೯೨ ರಿಂದ ೧೯೯೬
- ರಾಜ್ಯಮಟ್ಟದ ಪ್ರಥಮ ಕಲಾ ಪ್ರದರ್ಶನ, ವಿಜಾಪುರ - ೧೯೯೩
- ೬ನೇ ರಾಷ್ಟ್ರೀಯ ಕಲಾ ಮೇಳ, ಮದ್ರಾಸ್ - ೧೯೯೩
- ರಾಜ್ಯಮಟ್ಟದ ದ್ವಿತೀಯ ಕಲಾ ಪ್ರದರ್ಶನ, ವಿಜಾಪುರ - ೧೯೯೪
- ರಾಜ್ಯಮಟ್ಟದ ಜಲವರ್ಣ ಕಲಾ ಪ್ರದರ್ಶನ, ಹುಬ್ಬಳ್ಳಿ - ೧೯೯೪
- ರಾಷ್ಟ್ರೀಯ ಕಲಾ ಮೇಳ, ಬೆಂಗಳೂರು - ೧೯೯೫
- ಕಲಾ ಸಂಯೋಜಿತಾ, ಬೆಂಗಳೂರು - ೧೯೯೫

- ರಾಷ್ಟ್ರೀಯ ಕಲಾ ಮೇಳ, ದೆಹಲಿ - ೧೯೯೬
- ರಾಜ್ಯಮಟ್ಟದ ಕಲಾ ಪ್ರದರ್ಶನ ಹಾಗೂ ಜಾನಪದ ಮೇಳ, ಬಸವನ ಬಾಗೇವಾಡಿ - ೧೯೯೬
- ಸಮೂಹ ಪ್ರದರ್ಶನ ಕರ್ನಾಟಕ ಲಲಿತ ಕಲಾ ಅಕಾಡೆಮಿ (ರವೀಂದ್ರ ಭವನ), ದೆಹಲಿ - ೧೯೯೯
- ಕರ್ನಾಟಕ ಲಲಿತ ಕಲಾ ಅಕಾಡೆಮಿ ೩೧ನೇ ವಾರ್ಷಿಕ ಕಲಾ ಪ್ರದರ್ಶನ, ಹಾಸನ - ೨೦೦೧ (ವಿಶೇಷ ಆಹ್ವಾನಿತರಾಗಿ ಭಾಗವಹಿಸಿದ್ದು)
- 'ದಿ ಮಿಲೇನಿಯಂ ಷೋ' ಸಮಕಾಲೀನ ಕಲಾ ಪ್ರದರ್ಶನ - ೨೦೦೨, ದೆಹಲಿ ('ಭಾರತೀಯ ಆರೋಗ್ಯ ಸಂಘಟನೆ' ವತಿಯಿಂದ ಆಯೋಜಿತ)
- ಚಾಲುಕ್ಯ ಉತ್ಸವ - ಬಾದಾಮಿ, ಐಹೊಳೆ, ಪಟ್ಟದಕಲ್ಲು - ೨೦೦೨
- ನಮ್ಮೂರ ಜಾತ್ರೆ - ಡಂಬಳ, ಗದಗ - ೨೦೦೨
- ದಶಮಾನೋತ್ಸವ - ವಿಜಯ ಚಿತ್ರಕಲಾ ಮಹಾವಿದ್ಯಾಲಯ, ಇಳಕಲ್ - ೨೦೦೨
- ವಿಶ್ವಭಾರತಿಯವರು ನಡೆಸಿದ ರಾಷ್ಟ್ರೀಯ ಕಲಾ ಮೇಳ (ಹಂಪಿಯಲ್ಲಿ) - ೨೦೦೩
